**1**

# ಮೆಸ್ಸೀಯನಾದ ಯೇಸುವಿನ ವಂಶಾವಳಿ

# (1:1-17)

ಮತ್ತಾಯನ ಸುವಾರ್ತೆಯಲ್ಲಿ ಪ್ರಾರಂಭದ ವಾಕ್ಯಗಳು (1:1-17) ಹಲವು ಬಾರಿ ಸತ್ಯವೇದದಲ್ಲಿ ಉಪಯೋಗವಿಲ್ಲದ ವಾಕ್ಯಗಳೆಂದು ಅಭಿಪ್ರಾಯ ಹೊಂದಲಾಗಿದೆ. ಕೆಲವು ವಿದ್ಯಾರ್ಥಿಗಳು ಈ ವಾಕ್ಯಗಳನ್ನು ಬಿಟ್ಟು ಮುಂದೆ ಹೋಗುತ್ತಾರೆ, ಅವುಗಳು ಅನವಶ್ಯಕವಾಗಿರುವದರಿಂದ ಹೀಗೆ ಮಾಡುತ್ತಾರೆ. ಯಾಕೆ ಮತ್ತಾಯನು ಇವುಗಳನ್ನು ತನ್ನ ಸುವಾರ್ತೆಯಲ್ಲಿ ಸೇರಿಸಿದ್ದಾನೆ, ಮತ್ತು ಅವುಗಳ ಉಪಯೋಗದ ಉದ್ದೇಶವೇನು? ಸಾಮಾನ್ಯವಾಗಿ ಹೇಳುವುದಾದರೆ ಸತ್ಯವೇದದಲ್ಲಿ ವಂಶಾವಳಿ ಕೊಟ್ಟಿರುವದು ಪ್ರಾಥಮಿಕವಾಗಿ ಸಂತತಿಯನ್ನು ಸ್ಥಾಪಿಸುವದಕ್ಕಾಗಿಯೇ ಇರುತ್ತದೆ. Douglas S. Huffman ಈ ರೀತಿಯಲ್ಲಿ ವಿವರಿಸುತ್ತಾರೆ, "ಯೇಸುವಿನ ಪ್ರಾರಂಭದ ವಂಶಾವಳಿಯು [ಹಳೆ ಒಡಂಬಡಿಕೆಯ] ನೋಹ ಮತ್ತು ಅಬ್ರಾಹಾಮನ ವಂಶಾವಳಿಯ ಅಂತಹದೇ, ಅವೆರಡು ವಂಶವಳಿಯ ವೃತ್ತಾಂತಗಳೊಂದಿಗೆ ಪ್ರಸ್ತಾವಿಸಲಾಗಿದೆ (ಆದಿಕಾಂಡ 5:1-32 ಮತ್ತು 11:10-32, ಅನುಕ್ರಮವಾಗಿ)."[1]

ಇಲ್ಲಿಯವರೆಗೆ ವಂಶಾವಳಿಯು ಕುಟುಂಬದ ಸಂಬಂಧವನ್ನು ತಿಳಿಸುತ್ತದೆ, ಅವೆಲ್ಲವುಗಳು ಯಾವಾಗಲು ಕ್ರಮಾನುಸಾರವಾಗಿಲ್ಲ; ಹೆಸರುಗಳು ಬಹಳವಾಗಿ ಬಿಟ್ಟು ಬಿಡಲಾಗಿರಬಹುದು (ವ್ಯಾಖ್ಯಾನ ನೋಡಿರಿ 1:8, 11). ಈ ರೀತಿಯಾಗಿ ಬಿಟ್ಟು ಬಿಡುವದು ಸತ್ಯವೇದದ ಬರಹಗಾರರಲ್ಲಿ ಸಾಮಾನ್ಯವಾದ ಅಭ್ಯಾಸವಾಗಿತ್ತು. ಬಹುಶಃ ಒಳ್ಳೆಯ ಉದ್ದೇಶದಿಂದ ಕೆಲವು ನಿರ್ದಿಷ್ಟವಾದ ಸಂಖ್ಯೆಯನ್ನು ಸಾಧಿಸುವುದಕ್ಕೆ ಅಥವಾ ನಿರ್ದಿಷ್ಟವಾದ ಹಲವು ವ್ಯಕ್ತಿಗಳು ವಂಶಾವಳಿಯಲ್ಲಿ ಪ್ರಸ್ತಾಪಿಸಲು ಅರ್ಹತೆಯಿಲ್ಲದ ವಂಶಾವಳಿಯನ್ನು ಬಿಟ್ಟುಬಿಟ್ಟಿರಬಹುದು. ಈ ವಂಶಾವಳಿಯ ಸಂಬಂಧಗಳನ್ನು ಸ್ಥಾಪಿಸಲು ಅವು ಸಮಗ್ರತೆಯಾಗಿರುವ ಅಗತ್ಯವಿರುವುದಿಲ್ಲ.

ಯೆಹೂದ್ಯರು ತಮ್ಮ ವಂಶಾವಳಿಯನ್ನು ರುಜುವಾತುಪಡಿಸಲು, ತಮ್ಮ ಕುಟುಂಬದ ಪಿತ್ರಾರ್ಜಿತವನ್ನು ಕ್ರಮವಾಗಿ ಸ್ವೀಕರಿಸಲು, ಕಾನನ ದೇಶದಲ್ಲಿ ಪಿತ್ರಾರ್ಜಿತ ಸ್ವಾಸ್ಥ್ಯ ಹೊಂದಲು ಅದನ್ನು ಉಪಯೋಗಿಸಿದ್ದಾರೆ (ಅರಣ್ಯಕಾಂಡ 26:52-56). ಕೆಲವು ಯಾಜಕರು ಬೆಬಿಲೋನಿನ ಸೆರೆ ನಂತರ ಯೆರೂಸಲೇಮಿಗೆ ಹಿಂತಿರುಗಿರುವದರಲ್ಲಿ ಅವರ ಕುಟುಂಬದ ಸಂಬಂಧ ಹೊಂದಿರುವ ಪತ್ರಗಳನ್ನು ಹುಡುಕಿದರು. "ಅವರ ವಂಶಾಪರಂಪರೆಯ ದಾಖಲಾತಿ ಸಿಕ್ಕಲಿಲ್ಲ." ಸಿಕ್ಕದ ಕಾರಣ, "ಅಶುದ್ಧರೆಂದು ಯಾಜಕೋದ್ಯೋಗದಿಂದ ತಳ್ಳಲ್ಪಟ್ಟರು" (ಎಜ್ರನು 2:61, 62). ಆ ವಿಷಯದಲ್ಲಿ ಅವರ ವಂಶಾವಳಿಗಳು ಅವರಿಗೆ ಮುಖ್ಯವಾಗಿರುವದನ್ನು ರುಜುವಾತುಪಡಿಸಿವೆ.

ಮಹಾ ಹೆರೋದನು, Idumean (Edomite)ನಿಗೆ, ವಂಶವಾಳಿಯು ಮುಖ್ಯವಾಗಿದೆ. ಆತನಿಗೆ "ಯೆಹೂದ್ಯರ ಅರಸ" ನೆಂದು ಗುರುತಿಸಿಕೊಳ್ಳಬೇಕಾಗಿತ್ತು, ಮತ್ತು ತನ್ನ ಸಿಂಹಾಸನಕ್ಕಾಗಿ ಯಾರು ಸ್ಪರ್ಧಿಗಳಿರಬಾರದೆಂದು ಕೊಂಡಿದ್ದನು. ಯಾರಾದರೂ ಈ ಮಾರ್ಗದಲ್ಲಿ ಬರುವವರಾಗಿದ್ದರೆ ಅವರನ್ನು ಮೋಸದಿಂದ ಕೊಲೆ ಮಾಡಿಸುತ್ತಿದ್ದನು, ತನ್ನ ಸ್ವಂತ ಹೆಂಡತಿಯಾಗಿರಬಹುದು, ಆಕೆಯ ಇಬ್ಬರು ಸಹೋದರರನ್ನು ಮತ್ತು ತನ್ನ ಸ್ವಂತ ಮೂರು ಮಕ್ಕಳನ್ನು ಹಾಗೆಯೇ ಕೊಲೆ ಮಾಡಿಸಿದ್ದನು. Augustus Caesar ರವರು ಆತನ ಕುರಿತಾಗಿ ವರದಿ ಮಾಡಿ ಹೀಗೆ ಹೇಳಿದ್ದಾನೆ, "ಹೆರೋದನ ಮಕ್ಕಳಾಗಿರುವದಕ್ಕಿಂತಲೂ ಆತನ ಹಂದಿಗಳಾಗಿರುವದು ಉತ್ತಮವಾಗಿತ್ತು"[2] ಎಂದು ಹೇಳಲಾಗಿದೆ. ಹೆರೋದನು

ಯೆಹೂದ್ಯಮತವನ್ನು ರೂಢಿಯ ಆಚರಣೆ ಮಾಡುವವನಾಗಿದ್ದನು, ಆದ್ದರಿಂದ ಅವನು ಒಂದು ಹಂದಿಯನ್ನು ಕೊಲ್ಲುವದಿಲ್ಲ; ಆದರೆ ಅವನಿಗೆ ತನ್ನ ಮಕ್ಕಳನ್ನು ಕೊಲ್ಲುವದರ ಕುರಿತು ಸ್ಪಷ್ಟ ಪ್ರಜ್ಞೆ ಅವನಿಗಿರಲಿಲ್ಲ. Julius Africanus ರವರ ಪ್ರಕಾರ, ತನ್ನ ಒಳಿತಿಗೋಸ್ಕರ ಹೆರೋದನು ವಂಶಾವಳಿಯ ದಾಖಾಲಾತಿಗಳನ್ನು ನಾಶಮಾಡಿದನು, ಮತ್ತು ತನಗೆ ಅನೂಕೂಲವಾಗುವ ಲೀತಿಯಲ್ಲಿ ಇತಿಹಾಸವನ್ನು ಪುನಃ ಬರೆದನು.[3] ರಾಜನು ಮೂಡಣ ದೇಶದಿಂದ ಕ್ರಿಸ್ತನನ್ನು ಆರಾಧಿಸಲು ಬಂದಿರುವ ಜೋಯಿಸರಿಂದ ಮೋಸ ಹೋದಾಗ ಸಾಮೂಹಿಕ ಸಂಹಾರಕ್ಕೆ ಆಜ್ಞೆ ಮಾಡುತ್ತಾನೆ. "ಬೇತ್ಲೆಹೇಮಿನಲ್ಲಿಯೂ ಅದರ ಎಲ್ಲಾ ನೆರೆಹೊರೆ ಹಳ್ಳಿಗಳಲ್ಲಿಯೂ ಎರಡು ವರ್ಷದೊಳಗಿನ ಗಂಡುಕೂಸುಗಳನ್ನೆಲ್ಲಾ ತಾನು ಜೋಯಿಸರಿಂದ ತಿಳಿದುಕೊಂಡ ಕಾಲಕ್ಕೆ ಸರಿಯಾಗಿ ಕೊಲ್ಲಿಸಿದನು" (ಮತ್ತಾಯ 2:16).

ಮೇಲೆ ಹೇಳಿರುವ ಐತಿಹಾಸಿಕ ಹಿನ್ನಲೆಯಲ್ಲಿ ಮತ್ತಾಯನು ಸುವಾರ್ತೆಯನ್ನು ಬರೆದನು. ಯೇಸುವಿಗೆ ಭೂಲೋಕದ ತಂದೆಯಾಗಿರುವ ಯೋಸೇಫನಿಂದ ಪತ್ತೆ ಹಚ್ಚಲಾಗಿರುವ ವಂಶಾವಳಿಯನ್ನು ಮತ್ತಾಯನು ಬರೆದಿದ್ದಾನೆ ಮತ್ತು ಲೂಕ 3:23-38ರಲ್ಲಿ ಮರಿಯಳ ಕುಟುಂಬದ ಮುಖಾಂತರ ಬರೆದಿರುವುದು ಇದೆ ಎಂದು ಸುಪ್ರಸಿದ್ಧವಾದ ಅಭಿಪ್ರಾಯವು ಹೇಳುತ್ತದೆ. ಈ ವಿಷಯದಲ್ಲಿ, ಲೂಕನು ಕ್ರಿಸ್ತನ ಸ್ವಾಭಾವಿಕವಾದ ಸಂತತಿಯನ್ನು ಮರಿಯಳ ಮುಖಾಂತರವಾಗಿ ಪಟ್ಟಿ ಮಾಡಿದ್ದಾನೆ, ಮತ್ತು ಮತ್ತಾಯನು ರಾಜವೈಭವದ ಉತ್ತಮವಾದ (ಅಥವಾ ಶಾಸನ ಸಮ್ಮತವಾದ) ಲೀತಿಯಲ್ಲಿ ಯೋಸೇಫನ[4] ದತ್ತು ಪುತ್ರನು ಎನ್ನುವ ಸಂತತಿಯ ಕುರಿತು ವಿವರಿಸುತ್ತಾನೆ. ಯೇಸು "ದಾವೀದ ಕುಮಾರನು" ಎಂಬುವುದು ಮತ್ತಾಯನಿಗೆ ಅತ್ಯಧಿಕವಾದ ಪ್ರಾಮುಖ್ಯವಾದ ಸಂಗತಿಯಾಗಿತ್ತು. ಆತನು ಇಸ್ರಾಯೇಲ್ಯರ ಸಿಂಹಾಸನಕ್ಕೆ ಕಾನೂನುಬದ್ಧವಾದ ವಾರಸುದಾರ ಎಂದು ರುಜುವಾತು ಪಡಿಸಬೇಕಿತ್ತು (1:1). ದಾವೀದನ ಸಂತಾನದ ಮುಖಾಂತರವೇ ಈ ಲೋಕದಲ್ಲಿ ಮೆಸ್ಸೀಯನು ಬರುವನೆಂದು ದೇವರು ಪ್ರವಾದಿಯಾದ ನಾತಾನನ ಮುಖಾಂತರ ವಾಗ್ದಾನ ಮಾಡಿದನು (2 ಸಮುವೇಲ 7:12-16).

**ವಂಶಾವಳಿಗಳಲ್ಲಿ ವ್ಯತ್ಯಾಸಗಳು**

| *ಮತ್ತಾಯನ ವಂಶಾವಳಿ (ಮತ್ತಾಯ 1:1-17)* | *ಲೂಕನ ವಂಶಾವಳಿ (ಲೂಕ 3:23-38)* |
|---|---|
| 1. ಪುಸ್ತಕದ ಪ್ರಾರಂಭದಲ್ಲಿಯೇ ಇದೆ | 1. ಯೇಸುವಿನ ದೀಕ್ಷಾಸ್ನಾನದ ನಂತರ ಇದೆ |
| 2. ಮೂರು ಭಾಗಗಳು (14+14+14) | 2. ಭಾಗಗಳು ಇಲ್ಲ |
| 3. ಅಬ್ರಹಾಮನಿಂದ ಯೇಸುವಿನವರೆಗೆ | 3. ಯೇಸುವಿನಿಂದ ಆದಮ/ದೇವರ ವರೆಗೆ |
| 4. "ತಂದೆಯಾಗಿದ್ದಾನೆ" (ಇಳಿಕೆ ಕ್ರಮದಲ್ಲಿ) | 4. "ಮಗನು" (ಏರಿಕೆ ಕ್ರಮದಲ್ಲಿ) |
| 5. ಹೆಂಗಸರ, ಸಹೋದರರು ಒಳಗೊಂಡಿದ್ದಾರೆ | 5. ಪೂರ್ವಜರನ್ನು ಮಾತ್ರ ಒಳಗೊಂಡಿದೆ |
| 6. ದಾವೀದ ಮಗನಾದ ಸೊಲೊಮೋನನ ವಂಶಾವಳಿ ಮುಖಾಂತರ | 6. ದಾವೀದನ ಮಗನಾದ ನಾತಾನನ ವಂಶಾವಳಿ ಮುಖಾಂತರ |

# ಪರಿಚಯ (1:1)

**[1]ಯೇಸುವಿನ ವಂಶಾವಳಿಯ ದಾಖಲೆಯು ಮೆಸ್ಸೀಯನು, ದಾವೀದ ಕುಮಾರನು ಅಬ್ರಾಹಾಮನ ಮಗನು.**

**ವಚನ 1.** ಈ ಮೊದಲಿನ ವಚನವು ಮುಂದೆ ಬರುವ ವಂಶಾವಳಿಗೆ ಪರಿಚಯಕೊಡುತ್ತದೆ. **ವಂಶಾವಳಿಯ ದಾಖಲಾತಿಯ ಶಬ್ದ** (*biblos geneseōs*) **ಪ್ರಯೋಗವು** "ಆರಂಭಗಳ ಪುಸ್ತಕ ಅಥವಾ ಆವಿರ್ಭಾವಗಳು" ಎಂದರ್ಥವಾಗುತ್ತವೆ. ಈ ಶಬ್ದವು ಸಂಪೂರ್ಣ ಮತ್ತಾಯನ ಪುಸ್ತಕವನ್ನು ಸೂಚಿಸಬಹುದು, "ಹೆಚ್ಚಿನ ವಿದ್ವಾಂಸರು"[5] ಈ ಭಾಗವನ್ನು ಹೆಚ್ಚಾಗಿ ವಂಶಾವಳಿಯನ್ನು ಸೂಚಿಸಲು ಮಾತ್ರ ಉಪಯೋಗಿಸಲಾಗಿದೆ ಎಂಬ ಆಲೋಚನೆಯನ್ನು ಹೊಂದಿದ್ದರು. *ಆರಂಭಗಳು* ಎಂಬ ಶಬ್ದವು ವಾಸ್ತವಿಕವಾಗಿ ಸೆಪ್ಟಜಂಟ್‌ನಲ್ಲಿನ ವಂಶಾವಳಿ ಕ್ರಮದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದ್ದರಿಂದ ಇಂತಹ ಕೊನೆಯ ಅಭಿಪ್ರಾಯಕ್ಕೆ ಸಹಕರಿಸುತ್ತಿದೆ (ನೋಡಿರಿ ಆದಿಕಾಂಡ 5:1; 6:9; 10:1, 32; 11:10, 27).

**ಮೆಸ್ಸೀಯನಾದ ಯೇಸುವಿನ ವಂಶಾವಳಿ.** Donald A. Hagner ರವರು ಅವಲೋಕಿಸಿ ಹೇಳಿದ್ದೇನೆಂದರೆ, "ಹಳೇ ಒಡಂಬಡಿಕೆಯಲ್ಲಿ ವಂಶಾವಳಿಯನ್ನು ಗಮನಿಸುವದು ಮುಖ್ಯವಾಗಿದೆ ಮತ್ತು ಯೆಹೂದ್ಯರ ಸಂಪ್ರದಾಯವು ಪೂರ್ವಜರ ಪಟ್ಟಿಯಲ್ಲಿರುವ ಮೊದಲನೆಯ ಹೆಸರುಗಳಿಂದ ತಮ್ಮ ಹೆಸರನ್ನು ತೆಗೆದುಕೊಳ್ಳುತ್ತಿದ್ದರು. ಇಲ್ಲಿ, ಹಾಗಿದ್ದರೂ, ಪಟ್ಟಿಯ ಕೊನೆಯ ಹೆಸರಿನಿಂದಲೇ ವಂಶಾವಳಿಯನ್ನು ಹೆಸರಿಸಿದರು."[6] ಈ ವಿಶೇಷತೆಯು ಯೇಸುವಿನ ಮುಖ್ಯತ್ವವನ್ನು ಒತ್ತಿ ಹೇಳುತ್ತದೆ.

ಗ್ರೀಕ್‌ನಲ್ಲಿ ಯೇಸುವನ್ನು "ಕ್ರಿಸ್ತನು" (*Christos*) ಎಂದು ಕರೆಯುತ್ತಿದ್ದರು. "**ಅಭಿಷೇಕ** ಹೊಂದಿದವನು" ಎಂದು ಇದರರ್ಥ ಮತ್ತು ಹಿಬ್ರೂ ಭಾಷೆಯಲ್ಲಿನ "ಮೆಸ್ಸೀಯ" (*Mashiach*) ಎಂಬುವದು ಇದಕ್ಕೆ ಸಮಾನಾರ್ಥವುಳ್ಳದ್ದು. ಕೆಲವು ಸಾರಿ ಮಾತ್ರ NASBಯಲ್ಲಿ *Christos* ಎಂಬುದನ್ನು "ಮೆಸ್ಸೀಯ" ನೆಂದು ಭಾಷಾಂತರಿಸಲಾಗಿದೆ (1:1, 16, 17; 2:4; ಯೋಹಾನ 1:41; 4:25). "ಕ್ರಿಸ್ತನು" ಎಂಬುದು ಯೇಸುವಿನ ಮೂಲ ಹೆಸರಾಗಿತ್ತು ಸ್ವಲ್ಪಕಾಲದ ನಂತರ ಈ ಹೆಸರು ಎರಡನೆಯ ಹೆಸರಾಗಿ ಉಪಯೋಗಿಸಲಾಗಿತ್ತು.

ವಚನ 1ರಲ್ಲಿ ಯೇಸು ಕ್ರಿಸ್ತನ ವಂಶಾವಳಿಯ ಮುಖ್ಯ ವ್ಯಕ್ತಿಗಳನ್ನು ಎತ್ತಿ ತೋರಿಸುತ್ತದೆ (1:17ರ ವಿವರಣೆ ನೋಡಿರಿ). **ದಾವೀದ ಕುಮಾರನು** ಎನ್ನುವ ವಾಕ್ಯವು ದಾವೀದನ ವಂಶದಲ್ಲಿ ಯೇಸುವಿನ ವಂಶಾವಳಿಯ ಬೇರು ಸ್ಥಿರಗೊಂಡಿರುವದನ್ನು ಹಾಗೂ ದೇವರು ತನ್ನ ವಾಗ್ದಾನಗಳನ್ನು ನೆರವೇರಿಸಿದ್ದಾನೆ ಎಂದು ತೋರಿಸುತ್ತದೆ. 2 ಸಮುವೇಲ 7:12ರಲ್ಲಿ, ದೇವರು ದಾವೀದನಿಗೆ ಹೇಳಿದ್ದೇನೆಂದರೆ, "ಆವನ ರಾಜ್ಯಸಿಂಹಾಸನವನ್ನು [ಆತನ ವಂಶಾವಳಿಗೆ] ನಿರಂತರವಾಗಿ ಸ್ಥಿರಪಡಿಸುವೆನು" (ನೋಡಿರಿ ಕೀರ್ತನೆ 89:29; 132:11; ಲೂಕ 1:32; ಅಪೊಸ್ತಲರ ಕೃತ್ಯಗಳು 2:30-36). ಮತ್ತಾಯನ ಸುವಾರ್ತೆಯಲ್ಲಿ, "ದಾವೀದ ಕುಮಾರ" ಎಂಬ ಹೆಸರನ್ನು ಮೆಸ್ಸೀಯನಿಗೆ ಸಂಬಂಧಿಸಿದ ಹೆಸರಾಗಿ ಆಗಾಗ್ಗೆ ಉಪಯೋಗಿಸಲಾಗಿದೆ (9:27; 12:23; 15:22; 20:30, 31; 21:9, 15; 22:42). "ದಾವೀದನ ವಂಶದವನಾಗಿ ಆತನು ಸಿಂಹಾಸನವನ್ನು ಅನ್ಯಾಯವಾಗಿ ಅಪಹರಿಸಿಕೊಳ್ಳದೆ ನ್ಯಾಯಸಮ್ಮತವಾಗಿ ದೇವರ ಜನರನ್ನು ಆಳುವವನಾಗಿದ್ದಾನೆ."[7]

ಯೇಸುವನ್ನು **ಅಬ್ರಾಹಾಮನ ಮಗನು** ಎಂದು ಸಹ ಸೂಚಿಸಲಾಗಿದೆ. Leon Morris ರವರು ಹೀಗೆ ವ್ಯಾಖ್ಯಾನಿಸಿದ್ದಾರೆ,

> ಅಬ್ರಹಾಮನೊಂದಿಗೆ ದೇವರು ಒಪ್ಪಂದ ಮಾಡಿಕೊಂಡದ್ದರಿಂದ ವಿಶೇಷ ಅರ್ಥದಲ್ಲಿ ಇಸ್ರಾಯೇಲರನ್ನು ದೇವರ ಜನರನ್ನಾಗಿ ಪ್ರತ್ಯೇಕಿಸಿಡಲಾಗಿದೆ (ಆದಿಕಾಂಡ 12:2-3;

15:17-21; 17:1-14). ಇಸ್ರಾಯೇಲ್ಯರೆಲ್ಲರು ಒಂದು ಶ್ರೇಷ್ಟ ಮೂಲಪುರುಷನ ಸಂತತಿಯವರಾಗಿದ್ದರಿಂದ ಅತಿಶೆಯಿಸುತ್ತಿದ್ದರು, ಮತ್ತು ಕ್ರೈಸ್ತರು ಆತನನ್ನು ನಂಬಿದವರ ಉತ್ಕೃಷ್ಟವಾದ ಉದಾಹರಣೆಯಾಗಿ ಆತನಲ್ಲಿ ವಿಶೇಷವಾದ ಪ್ರೀತಿಯನ್ನಿಟ್ಟಿದ್ದರು (ರೋಮಾಪುರದವರಿಗೆ ಬರೆದ ಪುಸ್ತಕದಲ್ಲಿ ಈ ವಿಷಯವನ್ನು ವಿಶೇಷವಾಗಿ ಪೌಲನು ವಿವರಿಸಿದ್ದಾನೆ).[8]

ಈ ವಿವರಣೆ ಯೇಸುವನ್ನು ಇಸ್ರಾಯೇಲ್ಯರ ವಂಶಾವಳಿಯ ಮೂಲಪುರುಷನಾದ ಅಬ್ರಹಾಮನೊಂದಿಗೆ ಇಡುವುದಲ್ಲದೆ, ದೇವರು ಅಬ್ರಹಾಮನಿಗೆ ಕೊಟ್ಟ ವಾಗ್ದಾನದ ನೆರವೇರಿಕೆಯಾಗಿರುವನೆಂದು ಯೇಸುವನ್ನು ತೋರಿಸುತ್ತದೆ. “ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು” (ಆದಿಕಾಂಡ 12:3) ಎಂದು ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದನು. ನಂತರ, “ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವಾಗುವದು” (ಆದಿಕಾಂಡ 22:18) ಎಂದು ಅಬ್ರಹಾಮನಿಗೆ ಮಾತುಕೊಟ್ಟನು. “ಕ್ರಿಸ್ತನೇ” ಅಬ್ರಹಾಮನ “ಸಂತತಿ” ಎಂದು ಪೌಲನು ವಿವರಿಸಿದ್ದಾನೆ (ಗಲಾತ್ಯ 3:16). ಆತನ ಮುಖಾಂತರ ಎಲ್ಲಾ ದೇಶಗಳು ಆಶೀರ್ವಾದಿಸಲ್ಪಡುತ್ತವೆ (ನೋಡಿರಿ 28:18-20).

## ಒಂದು ಕುಟುಂಬದ ಕುಲಪತಿಗಳು (1:2-6)

**[2]ಅಬ್ರಹಾಮನು ಇಸಾಕನನ್ನು ಪಡೆದನು. ಇಸಾಕನು ಯಾಕೋಬನನ್ನು ಪಡೆದನು. ಯಾಕೋಬನು ಯೆಹೂದನನ್ನೂ ಅಣ್ಣತಮ್ಮಂದಿರನ್ನೂ ಪಡೆದನು. [3]ಯೆಹೂದನು ತಾಮಾರಳಲ್ಲಿ ಪೆರೆಚನನ್ನೂ ಜೆರಹನನ್ನೂ ಪಡೆದನು. ಪೆರೆಚನು ಹೆಚ್ರೋನನನ್ನು ಪಡೆದನು. [4]ಹೆಚ್ರೋನನು ಅರಾಮನನ್ನು ಪಡೆದನು. ಅರಾಮನು ಅಮ್ಮಿನಾದಾಬನನ್ನು ಪಡೆದನು. ಅಮ್ಮಿನಾದಾಬನು ನಹಶೋನನನ್ನು ಪಡೆದನು. ನಹಶೋನನು ಸಲ್ಮೋನನನ್ನು ಪಡೆದನು. [5]ಸಲ್ಮೋನನು ರಾಹಾಬಳಲ್ಲಿ ಬೋವಜನನ್ನು ಪಡೆದನು. ಬೋವಜನು ರೂತಳಲ್ಲಿ ಓಬೇದನನ್ನು ಪಡೆದನು. ಓಬೇದನು ಇಷಯನನ್ನು ಪಡೆದನು. [6]ಇಷಯನು ಅರಸನಾದ ದಾವೀದನನ್ನು ಪಡೆದನು.**

ವಂಶಾವಳಿಯ ಮೊದಲಿನ (1:2-6) ಭಾಗವು, ಅಬ್ರಹಾಮನಿಂದ ಪ್ರಾರಂಭಗೊಂಡು ದಾವೀದನವರೆಗೂ ವಿಸ್ತರಿಸಿದ ಇಸ್ರಾಯೇಲ್ಯರ ಪಿತೃಗಳ ಪಟ್ಟಿಯನ್ನು ಒಳಗೊಂಡಿದೆ. ಹಳೆ ಒಡಂಬಡಿಕೆಯಲ್ಲಿ ಕಂಡು ಬರುವ ವಂಶಾವಳಿಯೊಂದಿಗೆ ಇದು ಸಮ್ಮತಿ ಹೊಂದಿದೆ (ರೂತ 4:18-22; 1 ಪೂರ್ವಕಾಲವೃತ್ತಾಂತ 1:28, 34; 2:1-15).

**ವಚನ 2. ಅಬ್ರಾಹಾಮನು** ಊರ್ ಎಂಬ ಕಲ್ದೀಯರ ಪಟ್ಟಣದಿಂದ ಹೊರಗೆ ಕರೆದು ಕಾನಾನ್ ದೇಶಕ್ಕೆ ಪ್ರಯಾಣ ಮಾಡಲು ಹೇಳಿದನು (ಆದಿಕಾಂಡ 15:7; 24:7; ಅಪೊಸ್ತಲರ ಕೃತ್ಯಗಳು 7:2-4). ಆತನ ಸಂತತಿಯ ಮೂಲಕ ದೇವರು ಇಸ್ರಾಯೇಲ್ ದೇಶವನ್ನು ಕಟ್ಟುವನು; ಮತ್ತು ಆ ಇಸ್ರಾಯೇಲ್ ದೇಶದಿಂದಲೇ ಕ್ರಿಸ್ತನು, ಲೋಕ ರಕ್ಷಕನು ಬರುವನು.

ಅಬ್ರಾಹಾಮನು ವೃದ್ಧನಾಗಿರುವಾಗ ದೇವರು ವಾಗ್ದಾನ ಮಾಡಿದ ಪುತ್ರನು **ಇಸಾಕನು** ಆಗಿದ್ದನು (ಆದಿಕಾಂಡ 15:4; 21:1-3). ಇಸಾಕನ ಮುಖಾಂತರವೇ ದೈವಿಕ ವಾಗ್ದಾನಗಳು ನೆರವೇರಿಸಲ್ಪಡುವುದೇ ಹೊರತು ಇಷ್ಮಾಯೇಲ್ ಮುಖಾಂತರವಲ್ಲ (ಆದಿಕಾಂಡ 16:1-16; 17:15-22).

ಇಸಾಕನಿಗೆ ಅವಳಿ ಮಕ್ಕಳು ಹುಟ್ಟಿದರು, ಅವರು ಏಸಾವ ಮತ್ತು **ಯಾಕೋಬ.** ಇವನು ಚೊಚ್ಚಲ ಮಗನಾಗಿರದಿದ್ದರೂ, ದೇವರು ಒಡಂಬಡಿಕೆಯ ಜನರನ್ನು ಕಟ್ಟುವುದಕ್ಕೆ

ಯಾಕೋಬನನ್ನು ಆರಿಸಿಕೊಂಡನು (ಆದಿಕಾಂಡ 25:23).

ಯಾಕೋಬನು ಹನ್ನೆರಡು ಮಕ್ಕಳಿಗೆ ತಂದೆಯಾಗಿದ್ದನು, ಅವರಲ್ಲಿ ಒಬ್ಬನು **ಯೆಹೂದನು.** ಯೆಹೂದನು ರಾಜಧಿಕಾರದಲ್ಲಿರುವನೆಂದು ಯಾಕೋಬನು ಪ್ರವಾದಿಸಿದನು: "ಯೆಹೂದನು ಪ್ರಾಯದ ಸಿಂಹದಂತಿದ್ದಾನೆ; ... ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ (Shiloh) ಆ ದಂಡವು ಯೆಹೂದನ ಕೈಯಿಂದ ತಪ್ಪುವುದಿಲ್ಲ, ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ; ಅವನಿಗೆ ಅನ್ಯಜನಗಳು ವಿಧೇಯರಾಗಿರುವರು" (ಆದಿಕಾಂಡ 49:9, 10). ಅರಸನಾದ ದಾವೀದನು (1:6) ಮತ್ತು ಆತನ ಸಂತತಿಯವರು, ವಂಶಾವಳಿಗಳಲ್ಲಿ ಎರಡನೆಯ ಗುಂಪಿನಲ್ಲಿ ಒಳಗೊಂಡಿದ್ದಾರೆ (1:6-11), ಇವರೆಲ್ಲರು ಯೆಹೂದ್ಯನ ಸಂತತಿಯವರಾಗಿದ್ದಾರೆ. ಅಂತಿಮವಾಗಿ, ಯೇಸುವೇ "ಯುದಾ ಕುಲದಲ್ಲಿ ಜನಿಸಿದ ಸಿಂಹವೂ ದಾವೀದನ ಅಂಕುರದವನೂ ಆಗಿರುವಾತನು" (ಪ್ರಕಟಣೆ 5:5).

**ಮತ್ತು ಆತನ ಸಹೋದರರು** ಎನ್ನುವ ಪದಪ್ರಯೋಗವು ವಂಶಾವಳಿಯಲ್ಲಿ ಕಾಣಿಸುತ್ತದೆ, "ಯಾಕೆಂದರೆ ಎಲ್ಲಾ ಹನ್ನೆರಡು ಕುಲಗಳು ಒಟ್ಟಿಗೆ ಸೇರಿ ಮಾತಾಡುವದು ಸಾಂಪ್ರದಾಯಿಕವಾಗಿದೆ ಅಥವಾ ಯಾಕೆಂದರೆ ವಂಶಾವಳಿಯಲ್ಲಿ ಎಲ್ಲಾ ಹನ್ನೆರಡು ಕುಲಗಳು ಇಸ್ರಾಯೇಲರಾಗಿದ್ದಾರೆ ಮತ್ತು ಮೆಸ್ಸೀಯನಲ್ಲಿ ಸರಿಸಮಾನವಾದ ಆಸಕ್ತಿವುಳ್ಳವ ರಾಗಿದ್ದಾರೆ."[9] ನ್ಯಾಯಸಮ್ಮತವೆಂದು ತೋರುವ ಮತ್ತೊಂದು ವಿವರಣೆಯ ಪ್ರಕಾರವಾಗಿ ಈ ವಾಕ್ಯಭಾಗವು, "ಸಾಧ್ಯತೆವುಳ್ಳ ಅನೇಕ ರಾಜವಂಶಸ್ಥರಲ್ಲಿ ಯೆಹೂದ್ಯನ ಗೋತ್ರವನ್ನು ಮಾತ್ರ ಆರಿಸಿಕೊಂಡನೆಂದು" ಸೂಚಿಸುತ್ತದೆ (ಆದಿಕಾಂಡ 49:10)."[10]

**ವಚನ 3. ಯೆಹೂದ್ಯನು ತಾಮಾರಳಲ್ಲಿ ಪೆರೆಚನನ್ನೂ ಜೆರಹನನ್ನೂ ಪಡೆದನು.** ಪೆರೆಚ ಮತ್ತು ಜೆರಹ ಇವರಿಬ್ಬರ ಹೆಸರನ್ನು ಪ್ರಸ್ತಾಪಿಸುವುದರ ವಾಸ್ತವಿಕತೆಯು ಬಹುಶಃ ಅವರ ಗರ್ಭಧಾರಣೆಯಲ್ಲಿ ನಡೆದ ಅದ್ವೀತಿಯವಾದ ಸಂದರ್ಭವನ್ನು ಪ್ರತಿಬಿಂಬಿಸುತ್ತದೆ. ಯೆಹೂದ್ಯನು ತನ್ನ ಸೊಸೆಯಾದ ತಾಮರಳೊಂದಿಗೆ ದೇವರ ವಿವಾಹದ ಆಚಾರವನ್ನು (ಗಂಡನ ತಮ್ಮನೊಡನೆ ವಿವಾಹ) ನಡೆಸಲಿಲ್ಲ, ಆಕೆಯು ವೇಶ್ಯಾ ಸ್ತ್ರೀಯಂತೆ ಅಲಂಕೃತಳಾಗಿ ಆತನನ್ನು ಮೋಸಮಾಡಿದಳು ಮತ್ತು ಯೆಹೂದ್ಯನು ಅವಳ ಮಕ್ಕಳಿಗೆ ತಂದೆಯಾದನು (ಆದಿಕಾಂಡ 38:1-30).

ಯೇಸುವಿನ ವಂಶಾವಳಿಯಲ್ಲಿ ತಾಮರಳು ಐದು ಸ್ತ್ರೀಯರಲ್ಲಿ ಮೊದಲನೆಯವಳಾಗಿದ್ದಾಳೆ, ಕೊನೆಯವಳು ಮರಿಯಳು (1:3, 5, 6, 16).[11] ಮೊದಲು ನಾಲ್ಕು ಸ್ತ್ರೀಯರು - ತಾಮರ, ರಹಾಬಾಳು, ರೂತಳು ಮತ್ತು ಬೆತ್ಸೆಬೆ, ಇವರು ಅಸಾಧರಣವಾದ ಪರಿಸ್ಥಿತಿಗಳನ್ನು ಹೊಂದಿದ್ದಾರೆ. Huffman ರವರು ಹೀಗೆ ಬರೆಯುತ್ತಾರೆ, "ಪ್ರತಿಯೊಬ್ಬರು ವಿಲಕ್ಷಣದ ಅಥವಾ ಅಸಾಧಾರಣ - ಅವಮಾನಕರವಾದದ್ದರಲ್ಲಿ - ಅವಳ ಜೊತೆಗಾರನ ಜೊತೆಯಲ್ಲಿ ಸೇರುವದರ ಕುರಿತು, ಮತ್ತು ದೇವರ ಸಂಕಲ್ಪದಲ್ಲಿ ಒಬ್ಬೊಬರು ಮುಖ್ಯವಾದ ಪಾತ್ರವನ್ನು ನಿರ್ವಹಿಸಿದ್ದಾರೆ (ಕೆಲವರು ಸ್ವಂತ ವೈಯಕ್ತಿಕವಾದ ಪ್ರೇರಣೆಯಿಂದ ಮತ್ತು ಆಗಾಗ್ಗೆ ದೊಡ್ಡ ವೈಯಕ್ತಿಕ ಅಪಾಯಕ್ಕೆ ಒಳಗಾಗಲು)."[12] ಪ್ರತಿಯೊಬ್ಬರ ವಿಷಯದಲ್ಲಿ, ಅವರ "ಕಳಂಕವನ್ನು ನಂತರ ತೆಗೆದುಹಾಕಲಾಗಿದೆ."[13]

ಇಲ್ಲಿರುವ ನಾಲ್ಕು ಜನ ಸ್ತ್ರೀಯರು ಕೆಲವು ರೀತಿಯಲ್ಲಿ ಮರಿಯಳ ವಿಶೇಷವಾದ ಪಾತ್ರಕ್ಕೆ ಛಾಯರೂಪವಾಗಿದ್ದರೆಂದು ಹೇಳಬಹುದು. ಫರಿಸಾಯರು ಅನುಸರಿಸುತ್ತಿದ್ದ ಸಂಪ್ರಾದಾಯದದಲ್ಲಿ, ಮೆಸ್ಸೀಯನ ನಿರೀಕ್ಷೆಯಲ್ಲಿ ಅವರು ಮಹಿಮೆ ಹೊಂದಿಕೊಳ್ಳುತ್ತಿದ್ದರಿಂದ, ಯೆಹೂದ್ಯ ನಾಯಕರು ಯೇಸುವನ್ನು ತಿರಸ್ಕರಿಸದಕ್ಕೆ ವಿರುದ್ಧವಾಗಿ ವಾದಿಸಲು, ಮತ್ತು ಆತನ ಜನನದ[14] ಸಮಯದಲ್ಲಿ ಸುತ್ತುವರಿದಿದ್ದ ಪರಿಸ್ಥಿತಿಗಳನ್ನು ವಿರೋಧಿಸಿ, ಆಕ್ಷೇಪಿಸಲು ಅವರನ್ನು ಮತ್ತಾಯನು ಉಪಯೋಗಿ ಸಿದನು. ಎಲ್ಲಾ ದೇಶಗಳಿಗಾಗಿರುವ ಕ್ರಿಸ್ತನ ಸೇವೆಯನ್ನು ಈ ನಾಲ್ಕು ಅನ್ಯ ಸ್ತ್ರೀಯರು

ಸೂಚಿಸುವಂತವರಾಗಿದ್ದಾರೆ.

ಅವಳ ಮಕ್ಕಳಲ್ಲಿ **ಪೆರೆಜನು** ಮೊದನೆಯವನು, ಅವನು ದಾವೀದನ ರಾಜ ವಂಶಾವಳಿಯಿಂದ ಬಂದವರಲ್ಲಿ ಒಬ್ಬನ ಮಗನಾಗಿದ್ದನು (ರೂತ 4:12, 18-22). ಆತನು ಐಗುಪ್ತದೇಶಕ್ಕೆ ಬಂದ ಯಾಕೋಬನ ವಂಶಾವಳಿಯಲ್ಲಿ ಒಬ್ಬನಾದ **ಹೆಚ್ರೋನನಿಗೆ** ತಂದೆಯಾದನು (ಆದಿಕಾಂಡ 46:8, 12). ಆತನ ಮಗನಾದ **ಆರಾಮನು** ಐಗುಪ್ತದಲ್ಲಿಯೇ ಜನಿಸಿದನು.

**ವಚನ 4. ಆರಾಮ** ಮತ್ತು **ಅಮ್ಮಿನಾದಾಬನ** ಮಧ್ಯೆ ಅನೇಕ ವಂಶಾವಳಿಗಳು ಇವೆ, ಐಗುಪ್ತದಲ್ಲಿ ಇಸ್ರಾಯೇಲ್ಯರು ಇದ್ದ 430 ವರ್ಷಗಳ ಕಾಲದ ಕುರಿತು ಇದು ವಿವರಿಸಲು ಸಹಾಯ ಮಾಡುತ್ತದೆ (ವಿಮೋಚನಕಾಂಡ 12:40, 41). ಲೂಕನು "ಅಮ್ಮಿನಾದಾಬ" ಎನ್ನುವ ಹೆಸರನ್ನು ವಂಶಾವಳಿಯಲ್ಲಿ ಸೇರಿಸಿದ್ದಾನೆ (ಲೂಕ 3:33), ಆ ಕಾಲಾವಧಿಯಲ್ಲಿರುವ ಕೊನೆಪಕ್ಷ ಒಂದು ವಂಶಾವಳಿಯನ್ನು ಪ್ರತಿಬಿಂಬಿಸುತ್ತದೆ. ಅಮ್ಮಿನಾದಾಬನು ಆರೋನನ ಮಾವನಾಗಿದ್ದನು (ವಿಮೋಚನಕಾಂಡ 6:23), ಅವನು ಇಸ್ರಾಯೇಲ್ಯರ ಮಹಾಯಾಜಕನಾಗಿದ್ದನು.

ಐಗುಪ್ತದಿಂದ ಬಿಡುಗಡೆಗೊಳ್ಳುವಾಗ ಯೆಹೂದ್ಯ ಕುಲಕ್ಕೆ ಅಮ್ಮಿನಾದಾಬನ ಮಗ **ನಹಶೋನನು** ನಾಯಕನಾಗಿದ್ದನು (ಅರಣ್ಯಕಾಂಡ 2:3, 4). ಇವನು ಮೊದಲನೆಯ ಖಾನೇಷುಮಾರಿಯಲ್ಲಿ ಸೇರಿಕೊಂಡಿದ್ದನು (ಅರಣ್ಯಕಾಂಡ 1:7), ಹೊಸದಾಗಿ ಕಟ್ಟಿದ ಗುಡಾರದ ಸೇವೆಗೆ ತ್ಯಾಗ ಕಾಣಿಕೆಗಳನ್ನು ತೆಗೆದುಕೊಂಡು ಬರುತ್ತಿದ್ದನು (ಅರಣ್ಯಕಾಂಡ 7:12-17), ಅವನ ಕುಲದವರು ಅರಣ್ಯದ ಪ್ರಯಾಣದಲ್ಲಿ ಹೊಸ ಸ್ಥಳಕ್ಕೆ ಹೋಗುವಾಗ ಅವರನ್ನು ಮುಂದಿದ್ದು ನಡೆಸಿದನು (ಅರಣ್ಯಕಾಂಡ 10:14).

ಯೆಹೋಶುವನ ನಾಯಕತ್ವದಲ್ಲಿ ಕಾನಾನನ್ನು ಗೆಲ್ಲಲು ನಹಶೋನನ ಮಗ **ಸಲ್ಮೋನನು** ಹೊರಡಿದನು. ವಚನ 3 ಮತ್ತು 4ರಲ್ಲಿ ಇರುವಂತಹ ಅನೇಕರೊಂದಿಗೆ ಹಳೆ ಒಡಂಬಡಿಕೆಯಲ್ಲಿ ಈತನ ಬಗ್ಗೆ ಸ್ವಲ್ಪಮಟ್ಟಿಗೆ ಹೇಳಲಾಗಿದೆ.

**ವಚನ 5. ಸಲ್ಮೋನನು ರಾಹಾಬಳಲ್ಲಿ ಬೋವಜನನ್ನು ಪಡೆದನು.** ವಿಜಯದ ಸಮಯದಲ್ಲಿ ರಾಹಾಬಳು ಯೆರಿಕೋವಿನಲ್ಲಿ ವೇಶ್ಯೆಯಾಗಿದ್ದಳು. ಅವರು ಹಿಡಿಯಲ್ಪಟ್ಟು ಮರಣದಂಡನೆಗೆ ಗುರಿಯಾಗುತ್ತಿದ್ದ ಸಂದರ್ಭದಲ್ಲಿ, ಇಸ್ರಾಯೇಲ್ಯರನ್ನು ಅವಳು ಅಡಗಿಸಿಟ್ಟಿದ್ದಳು (ಯೆಹೋಶುವ 2:1-7). ಅವರನ್ನು ರಕ್ಷಿಸಲು ತನ್ನ ಪ್ರಾಣವನ್ನೆ ಪಣಕ್ಕಿಟ್ಟಳು. ಯೆರಿಕೋವನ್ನು ಇಸ್ರಾಯೇಲರು ಸೆರೆಹಿಡಿದಾಗ, ದೇವರಲ್ಲಿಟ್ಟಿರುವ ನಂಬಿಕೆಯಿಂದ ಆಕೆಯು ಮತ್ತು ಆಕೆಯ ಕುಟುಂಬವನ್ನು ಕಾಪಾಡಲಾಯಿತು (ಇಬ್ರಿಯ 11:31; ಯಾಕೋಬ 2:25). ನಂತರ ಆಕೆಯು ಇಸ್ರಾಯೇಲನಾದ ಸಾಲ್ಮೋನನ್ನು ಮದುವೆಯಾದಳು, ಮತ್ತು ಅವರಿಗೆ ಬೋವಜನು ಮಗನಾಗಿ ಹುಟ್ಟಿದನು (ರೂತಳು 4:20: 21).

**ಬೋವಜನು ರೂತಳಲ್ಲಿ ಓಬೇದನನ್ನು ಪಡೆದನು.** ಈ ಸುಂದರವಾದ ಕಥೆ ರೂತಳ ಪುಸ್ತಕದಲ್ಲಿ ಹೇಳಲಾಗಿದೆ. ಬೋವಜನು ಬೇತ್ಲೆಹೇಮನ ಪ್ರಧಾನ ನಾಗರೀಕನಾಗಿದ್ದನು. ವಿಧವೆಯಾಗಿರುವ ಸಂಬಂಧಿ, ಬಡವಳಾಗಿರುವದರಿಂದ, ರೂತಳಿಗೆ ಕನಿಕರ ತೋರಿಸಿದನು. ರೂತಳು ವೈಯಕ್ತಿಕ ಅಪಾಯವನ್ನು ತನ್ನ ಮೇಲೆ ತೆಗೆದುಕೊಂಡು ಬೋವಜನಿಗೆ ಮದುವೆಯ ಪ್ರಸ್ತಾಪ ಮಾಡುತ್ತಾಳೆ (ರೂತಳು 3:6-14). ನಂತರದಲ್ಲಿ ಆಕೆಯು ಓಬೇದನಿಗೆ ಜನ್ಮ ಕೊಡುವದರ ಮುಖಾಂತರ ದಾವೀದ ವಂಶಾವಳಿಯವರೆಗೆ ಮುಂದುವರಿಯಿತು (ರೂತಳು 4:1-17). ಈ ನಾಲ್ಕು ಸ್ತ್ರೀಯರ ಪಟ್ಟಿ ಮರಿಯಳವರೆಗೆ ಮುಂದುವರಿಯಿತು. ರೂತಳು ಮಾತ್ರ ಸದ್ಗುಣವುಳ್ಳ ಸ್ತ್ರೀಯೆಂದು ಸೂಚಿಸಬಹುದು. ಆಕೆಯು ಮೂರ್ತಿಪೂಜಕರಾದ ಮೋವಾಬ್ಯದವಳಾಗಿದ್ದರು (ನೋಡಿರಿ ಧರ್ಮೋಪದೇಶಕಾಂಡ 23:3) ಸಹ "ಗುಣವಂತೆ"ಯಾಗಿದ್ದಳು (ರೂತಳು 3:11).

**ಓಬೇದನು ಇಷಯನನ್ನು** [ತಂದೆಯಾಗಿದ್ದನು] **ಪಡೆದನು.** ಓಬೇದ ಮತ್ತು ಇಷಯನ ಮಧ್ಯೆ ಅನೇಕ ಸಂತತಿಗಳು ಬಿಟ್ಟು ಬಿಡಲಾಗಿದೆ, ಅದು ನ್ಯಾಯಸ್ಥಾಪಕರ ಕಾಲದಲ್ಲಿರುವ ಹಲವು ನೂರು ವರ್ಷಗಳ ಕಾಲವನ್ನು ವಿವರಿಸುತ್ತದೆ (ನ್ಯಾಯಸ್ಥಾಪಕರು 11:26; 1 ಅರಸು 6:1). ಇಷಯನಿಗೆ ಎಂಟು ಮಕ್ಕಳಿದ್ದರು, ಅವನು ಬೆತ್ಲೆಹೇಮಿನಲ್ಲಿದ್ದನು ಮತ್ತು ಒಂದು ದೊಡ್ಡ ಕುರಿಗಳ ಹಿಂಡು ಆತನಿಗಿತ್ತು (1 ಸಮುವೇಲ 16:1-13; 17:12-18).

**ವಚನ 6.** ಇಷಯನ ಚಿಕ್ಕ ಮಗನಾಗಿರುವ **ದಾವೀದನನ್ನು** ದೇವರು ಆರಿಸಿಕೊಂಡು ಪ್ರವಾದಿಯಾದ ಸಮುವೇಲನಿಂದ ಅಭಿಷೇಕ ಮಾಡಲಾಯಿತು (1 ಸಮುವೇಲ 16:11-13). ಯೇಸು ಕ್ರಿಸ್ತನ ವಂಶಾವಳಿಯಲ್ಲಿ ದಾವೀದನ ತರುವಾಯ ಅನೇಕ ರಾಜರು ಇದ್ದರು, ದಾವೀದನು ಮಾತ್ರವೇ **ಅರಸನಾಗಿ** ಗುರುತಿಸಲ್ಪಟ್ಟನು (1:6-11). ಪರಿಚಯದಲ್ಲಿರುವ ಪ್ರಕಟಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು (1:1), ಈ ಸಾಹಿತ್ಯಕ್ಕೆ ಸಂಬಂಧಿಸಿದ ಅಂಶವು, ಅರಸನಾದ ದಾವೀದನಿಗೂ ಮತ್ತು ಮೆಸ್ಸೀಯನಿಗೂ ಮಧ್ಯ ಒಂದು ಬಲವಾದ ಬಂಧವನ್ನು ಏರ್ಪಡಿಸುತ್ತದೆ (1:16, 17). ಆದುದರಿಂದ ದಾವೀದನು "ಯೇಸುವಿನ ಮೊದಲ ಮಾದರಿಯಾಗಿ"[15] ಸೇವೆ ಮಾಡಿದನು.

## ದಾವೀದನ ರಾಜ ವಂಶಾವಳಿ (1:6-11)

**6ದಾವೀದನು ಊರೀಯನ ಹೆಂಡತಿಯಾಗಿದ್ದವಳಲ್ಲಿ ಸೊಲೊಮೋನನನ್ನು ಪಡೆದನು. 7ಸೊಲೊಮೋನನು ರೆಹಬ್ಬಾಮನನ್ನು ಪಡೆದನು. ರೆಹಬ್ಬಾಮನು ಅಬೀಯನನ್ನು ಪಡೆದನು, ಅಬೀಯನು ಆಸನನ್ನು ಪಡೆದನು. ಆಸನು ಯೆಹೋಷಾಫಾಟನನ್ನು ಪಡೆದನು. 8ಯೆಹೋಷಾಫಾಟನು ಯೆಹೋರಾಮನನ್ನು ಪಡೆದನು. ಯೆಹೋರಾಮನು ಉಜ್ಜೀಯನನ್ನು ಪಡೆದನು. 9ಉಜ್ಜೀಯನು ಯೋತಾಮನನ್ನು ಪಡೆದನು. ಯೋತಾಮನು ಆಹಾಜನನ್ನು ಪಡೆದನು. ಆಹಾಜನು ಹಿಜ್ಕೀಯನನ್ನು ಪಡೆದನು. 10ಹಿಜ್ಕೀಯನು ಮನಸ್ಸೆಯನ್ನು ಪಡೆದನು. ಮನಸ್ಸೆಯು ಆಮೋನನನ್ನು ಪಡೆದನು. 11ಆಮೋನನು ಯೋಷೀಯನನ್ನು ಪಡೆದನು. ಪ್ರಜೆಯು ಬಾಬೆಲಿಗೆ ಸೆರೆಹೋದ ಸಮಯದಲ್ಲಿ ಯೋಷೀಯನು ಯೆಕೊನ್ಯನನ್ನೂ ಅವನ ಅಣ್ಣತಮ್ಮಂದಿರನ್ನೂ ಪಡೆದನು.**

ಎರಡನೆಯ ಗುಂಪಿನ ಹೆಸರುಗಳ (1:6-11) ರಾಜರ ಪಟ್ಟಿಯು ದಾವೀದನಿಂದ ತದನಂತರ ಬಂದ ರಾಜರ ಪಟ್ಟಿಯ ಕ್ರಮವಾಗಿದೆ. ಸೊಲೊಮೋನನಿಂದ ಯೆಕೋನ್ಯನವರೆಗೆ ಇರುವ ಶ್ರೇಣಿ "ರಾಜವಂಶದ ಪರಂಪರೆಯ ವೈಭವವನ್ನು ಮತ್ತು ಅದರ ಪತನವನ್ನು ಕುರಿತು"[16] ಹೇಳುತ್ತದೆ.

**ವಚನ 6. ದಾವೀದನು ಊರೀಯನ ಹೆಂಡತಿಯಾಗಿದ್ದವಳಲ್ಲಿ ಸೊಲೊಮೋನನನ್ನು ಪಡೆದನು.** ಗ್ರೀಕ್ ಭಾಷೆಯಲ್ಲಿ ಅಕ್ಷರಾರ್ಥವಾಗಿ, "ದಾವೀದನು ಊರೀಯ ಎಂಬುವಳಲ್ಲಿ ಹುಟ್ಟಿದ ಸೊಲೊಮೋನನಿಗೆ ತಂದೆಯಾಗಿದ್ದನು" ಎಂದು ಹೇಳುತ್ತದೆ. ಅಲ್ಲಿ "ಬೆತ್ಷೇಬೆ" ಅಥವಾ "ಹೆಂಡತಿ" ಎಂದು ಸೇರಿಸಿಲ್ಲದಿದ್ದರೂ ಸ್ಪಷ್ಟತೆಗಾಗಿ ಈ ಶಬ್ದಗಳನ್ನು NASBನಲ್ಲಿ ಸೇರಿಸಲಾಗಿದೆ. ದಾವೀದನು ಬೆತ್ಷೇಬೆಯೊಂದಿಗೆ ಮಾಡಿದ ವ್ಯಭಿಚಾರದ ಕಥೆ ಮತ್ತು ಚೆನ್ನಾಗಿ ಗೊತ್ತಿರುವಂತಹ ಆಕೆಯ ಗಂಡನಾದ ಊರೀಯನನ್ನು ಕೊಲ್ಲಲು ಯತ್ನಿಸಿದ ಒಳಸಂಚು, ಮತ್ತು ಪ್ರವಾದಿಯಾದ ನಾತಾನನು ಗದರಿಸಿದ್ದು ಚೆನ್ನಾಗಿ ತಿಳಿದ ಕಥೆಯಾಗಿದೆ (2 ಸಮುವೇಲ 11:1-12:15). ಕೀರ್ತನೆ 51ರಲ್ಲಿ ವ್ಯಕ್ತಪಡಿಸಿದ ದಾವೀದನ ಪಶ್ಚಾತ್ತಾಪಕ್ಕೆ ಈ ಎಲ್ಲಾ ಸಂದರ್ಭಗಳು ನಡಿಸಿದವು.

ಹಾಗಿದ್ದರೂ, ಅವನ ಮೊದಲ ಮಗು ಸತ್ತು ಹೋಯಿತು, ದಾವೀದ ಮತ್ತು ಬೆತ್ಷೇಬೆಗೆ

ಸೊಲೊಮೋನನೆಂಬ ಎರಡನೆ ಮಗುವಾಯಿತು (2 ಸಮುವೇಲ 12:15-25). ದಾವೀದನು ಸಹ ಅನೇಕ ಹೆಂಡತಿಯರನ್ನೂ ಮಕ್ಕಳನ್ನೂ ಪಡೆದನು - ಸಿಂಹಾಸನಕ್ಕಾಗಿ ಪೈಪೋಟಿ ಮಾಡಿರುವ ಮಕ್ಕಳು ಸೇರಿದ್ದಾರೆ. ಆದುದರಿಂದ, ಬೆತ್ಷೇಬೆಳ ಆಸಕ್ತಿಯಿಂದಲೆ, ಪ್ರವಾದಿಯಾದ ನಾತಾನನಿಂದ ಆಕೆಯ ಮಗ ಸೊಲೊಮೋನನು ರಾಜನಾದನು (1 ಅರಸಗಳು 1:11-31). J. W. McGarvey ರವರು, ಬೆತ್ಷೇಬೆ "ದೇವರ ಅನುಗ್ರಹದಿಂದ ಕೂಡಿದ ರಹಸ್ಯ ಕಾರ್ಯಗಳಲ್ಲಿ, ದಾವೀದನ ಸಿಂಹಾಸನದ ಉತ್ತರಾಧಿಕಾರಿಗಳ ತಾಯಿಯಾಗಿ ಕಾರ್ಯ ನಿರ್ವಹಿಸಿದಳು" ಎಂದು ಹೇಳುತ್ತಾರೆ.[17]

ದಾವೀದನಿಗೆ ಇನ್ನೊಬ್ಬ ಮಗನು ಬೆತ್ಷೆಬೆಯಲ್ಲಿ ಹುಟ್ಟಿದನು. ಆತನ ಹೆಸರು ನಾತಾನನು (2 ಸಮುವೇಲ 5:14; 1 ಪೂರ್ವಕಾಲವೃತ್ತಾಂತ 3:5) ಲೂಕನ ವಂಶಾವಳಿಯಲ್ಲಿ ಸೊಲೊಮೋನನ ಹೊರತಾಗಿ, ಈ ನಾತಾನನ ಮುಖಾಂತರವೇ ಯೇಸುವಿನ ಮೂಲ ಪಿತೃಗಳನ್ನು ಪತ್ತೆಹಚ್ಚಲಾಗಿದೆ (ಲೂಕ 3:31).

**ವಚನ 7. ಸೊಲೊಮೋನನು** ಮೊದಲಿನಿಂದಲೆ "ಯೆಹೋವನನ್ನು ಪ್ರೀತಿಸುತ್ತಿದ್ದನು," ಅವನು ಸನ್ಮಾರ್ಗವನ್ನು ಬಿಟ್ಟು "ಅನೇಕ ಅನ್ಯಸ್ತ್ರೀಯರನ್ನು" ಮೋಹಿಸಿದನು (1 ಅರಸುಗಳು 3:3; 11:1-13). ಸೊಲೊಮೋನನ ವಿಗ್ರಹಾರಾಧನೆಯಿಂದ ಇಸ್ರಾಯೇಲ್ ರಾಜ್ಯವು ಎರಡು ವಿಭಾಗವಾಯಿತು (1 ಅರಸುಗಳು 11:26-40). ಸೊಲೊಮೋನನ ಮಗ ರೆಹಬ್ಬಾಮನು ತಂದೆಗಿಂತಲೂ ಕ್ರೂರವಾದ ಆಡಳಿತ ನೀತಿಯನ್ನು ಮಾಡಿದನು ಮತ್ತು ಉತ್ತರ ಭಾಗದ ಗೊತ್ರಗಳು ಯಾರೊಬ್ಬಾಮನ ನಾಯಕತ್ವದಲ್ಲಿ ದಂಗೆ ಎದ್ದರು (1 ಅರಸುಗಳು 12:1-24). ಆದುದರಿಂದ ಕೇವಲ ದಕ್ಷಿಣದಲ್ಲಿನ ಯುದಾಯದ ಮೇಲೆ ಮಾತ್ರ ಆಡಳಿತ ನಡೆಸಿದ **ರೆಹಬ್ಬಾಮನಿಂದ** ಯೊಕೊನ್ಯದವರೆಗೆ ರಾಜರುಗಳ ವಂಶಾವಳಿಯ ಪಟ್ಟಿಯನ್ನು ಮಾಡಿದರು (1:7-11).

ರೆಹಬ್ಬಾಮನು ತನ್ನ ತಂದೆಯಾದ ಸೊಲೊಮೋನನ ಹಾಗೆಯೇ ವಿಗ್ರಹಾರಾದಕನಾದನು. ಆತನ ಜನರು ಎತ್ತರದ ಸ್ಥಳಗಳನ್ನು, ಪವಿತ್ರ ಕಲ್ಲು ಕಂಬಗಳನ್ನು, ಅಶೇರ ವಿಗ್ರಹ ನಿಲುಗಂಬಗಳನ್ನು, ಮತ್ತು ದೇವದಾಸ ಧಾರ್ಮಿಕ ಆಚರಣೆಯನ್ನು ಮಾಡುತ್ತಿದ್ದರು. ರೆಹಬ್ಬಾಮನ ಆಡಳಿತದಲ್ಲಿ ಯೆಹೂದ್ಯದ ಪ್ರಾಂತದಲ್ಲಿ ದುಷ್ಟಕಾರ್ಯಗಳು ನಡೆಯುತ್ತಿದ್ದವು ಎನ್ನುವದಕ್ಕೆ "ಅಮ್ಮೋನಿಯಳಾದ ನಯಮಾ ಎಂಬಾಕೆಯು ಅವನ ತಾಯಿ" ಎಂಬ ಹೇಳಿಕೆ ಪುಷ್ಟಿ ನೀಡಿದೆ (1 ಅರಸುಗಳು 14:21-31).

ಅಬೀಯಾಮನು ಕೆಲವು ವರ್ಷಗಳು ಮಾತ್ರ ರಾಜ್ಯಬಾರ ಮಾಡಿದನು, ಅವನ ತಂದೆಯಾದ ರೆಹಬ್ಬಾಮನ ಹೆಜ್ಜೆಜಾಡನ್ನು ಹಿಂಬಾಲಿಸಿದನು (1 ಅರಸುಗಳು 15:1-8). ಇದಕ್ಕೆ ಭಿನ್ನವಾಗಿ ಅಬೀಯಾಮನ ಮಗನಾದ ಆಸನನು ಅಸಹ್ಯವಾದ ಮೂಲೆಗಳನ್ನು ತೆಗೆದು ಹಾಕಿ, ಮತ್ತು ದೇವದಾಸರನ್ನು ಆ ಸ್ಥಳದಿಂದ ತೆಗೆದು ಹಾಕಿ ದೇವರ ದೃಷ್ಟಿಯಲ್ಲಿ ಸರಿಯಾಗಿರುವದನ್ನೇ ಮಾಡಿದನು. ಮೂರ್ತಿಪೂಜೆ ಮಾಡುವವಳಾಗಿದ್ದ ತನ್ನ ಸ್ವಂತ ತಾಯಿಯಾದ (ಅಥವಾ ಬಹುಶಃ ಅಜ್ಜಿ), ಮಾಕಳನ್ನು ಗದ್ದುಗೆಯಿಂದ ತೆಗೆದು ಹಾಕಲು ನಿಶ್ಚಯಿಸುವಂತಹ ದೃಢ ವಿಶ್ವಾಸವನ್ನು ಹೊಂದಿದ್ದನು (1 ಅರಸುಗಳು 15:9-15).

**ವಚನ 8.** ಆಸನ ಮಗನಾದ **ಯೆಹೋಷಾಫಾಟನು ತನ್ನ** ತಂದೆಯ ಹೆಜ್ಜೆಜಾಡಿನಲ್ಲಿ ನಡೆದ ಒಳ್ಳೆಯ ರಾಜನಾಗಿದ್ದನು. ಇಸ್ರಾಯೇಲ್ಯರೊಂದಿಗೆ ಸಮಾಧಾನವಾಗಿದ್ದನು (1 ಅರಸುಗಳು 22:41-44). ಹಾಗಿದ್ದರು, ಜನರು ಆತನ ಆಳ್ವಿಕೆಯಲ್ಲಿ ಎತ್ತರ ಸ್ಥಳಗಳಲ್ಲಿ ಪೂಜೆ ಮಾಡುತ್ತಾ ಆರಾಧಿಸುತ್ತಾ ಇದ್ದರು.

ಯೆಹೋಷಾಫಾಟನ ಮಗ **ಯೋರಾಮ** (ಯೆಹೋರಾಮ) ನೀತಿಯುಳ್ಳ ರಾಜನಾಗಿರಲಿಲ್ಲ. ಇಸ್ರಾಯೇಲ್ಯರನ್ನು ಆಳಿದ ದುಷ್ಟ ರಾಜನಾಗಿರುವ ಅಹಾಬನ ಮಗಳಾದ ಆತಲ್ಯಳನ್ನು ಯೋರಾಮನು ಮದುವೆ ಮಾಡಿಕೊಂಡನು (2 ಅರಸುಗಳು 8:16-19).

ಈ ಸಮಯದಲ್ಲಿ ಮತ್ತಾಯನ ವಂಶಾವಳಿಯಲ್ಲಿ ಇನ್ನೊಂದು ಬಿರುಕು ಕಾಣಿಸಿಕೊಳ್ಳುತ್ತದೆ (ನೋಡಿರಿ 1:4, 5). **ಯೆಹೋರಾಮ** ಮತ್ತು **ಉಜ್ಜೀಯನ** (ಅಜರ್ಯ[18]) ಮಧ್ಯೆದಲ್ಲಿ ಯೆಹೂದ್ಯದಲ್ಲಿ ಮೂವರು ರಾಜರು ಹೆಚ್ಚಾಗಿ ಇದ್ದರು: ಅಹಜ್ಯ, ಯೆಹೋವಾಷ (ಯೋವಾಷ) ಮತ್ತು ಅಮಚ್ಯ (1 ಪೂರ್ವಕಾಲ ವೃತ್ತಾಂತ 3:11, 12; ನೋಡಿರಿ 2 ಅರಸುಗಳು 8:25-27; 12:1-21; 14:1-22). ಅವಳ ಮಗ ಅಹಜ್ಯ ಮರಣಹೊಂದಿದ ನಂತರ ದುಷ್ಟ ತಾಯಿ ಅತಲ್ಯಳು ಸಿಂಹಾಸನವನ್ನು ಕಿತ್ತುಕೊಂಡು ಮತ್ತು ದಾವೀದನ ಸಿಂಹಾಸನವನ್ನು ನಾಶಮಾಡಲು ಪ್ರಯತ್ನಿಸಿದಳು (2 ಅರಸುಗಳು 11). ಹಾಗಿದ್ದರೂ, ಚಿಕ್ಕ ಹುಡುಗನಾಗಿರುವ ಯೋವಾಷ (ಅವಳ ಸ್ವಂತ ಮೊಮ್ಮಗ) ಕಾಪಾಡಲ್ಪಟ್ಟು ನಂತರ ಯೆಹೂದ್ಯ ರಾಜ್ಯ ಸಿಂಹಾಸನದ ಮೇಲೆ ಅರಸನಾದನು. ಆತನ ಆಳ್ವಿಕೆಯಲ್ಲಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ಕಾರ್ಯಗಳು ಅವನನ್ನು ನೆನಪಿಸುತ್ತವೆ (2 ಅರಸುಗಳು 12). ಯೋವಾಷ ಮತ್ತು ಆತನ ಮಗನಾದ ಅಮಚ್ಯರನ್ನು ಒಳ್ಳೆಯ ರಾಜರೆಂದು ನೆನಪಿಸಿಕೊಳ್ಳುತ್ತಾರೆ (2 ಅರಸುಗಳು 12:2; 14:1-3).

**ವಚನ 9. ಉಜ್ಜೀಯನು** (ಅಜರ್ಯ) ಮತ್ತು ಆತನ ಮಗನಾದ **ಯೋತಾಮನು** "ಯೆಹೋವನ ದೃಷ್ಟಿಯಲ್ಲಿ ಒಳ್ಳೆಯದನ್ನೇ" (2 ಅರಸುಗಳು 15:3, 34) ಮಾಡಿದ್ದರಿಂದ ಅವರನ್ನು ಒಳ್ಳೆಯವರಾಗಿಯೇ ನೆನಪಿಸುಕೊಳ್ಳುತ್ತಾರೆ. ಏನೇ ಆದರೂ, ಯೆಹೂದ್ಯದ ಜನರ ಮೇಲೆ ಅನ್ಯ ಜನರ ಪ್ರಭಾವ ಹೆಚ್ಚಾಗಿ ಇರುವದರಿಂದ ಎತ್ತರ ಸ್ಥಳಗಳಲ್ಲಿ ವಿಗ್ರಹಾರಾಧನೆ ಮಾಡುತ್ತಿದ್ದರು (2 ಅರಸುಗಳು 15:4, 35). ಉಜ್ಜೀಯನ ಗರ್ವದ ನಿಮಿತ್ತವಾಗಿ ದೇವರು ಕುಷ್ಟರೋಗದಿಂದ ಆತನನ್ನು ಬಾದಿಸಿದನು: ಅವನು ದೇವಾಲಯದಲ್ಲಿ ದೂಪಹಾಕಬೇಕೆಂದು ಪ್ರಯತ್ನಿಸಿದನು, ಆ ಕಾರ್ಯವು ಯಾಜಕರಿಗೆ ನೇಮಕವಾಗಿತ್ತು (2 ಪೂರ್ವಕಾಲವೃತ್ತಾಂತ 26:16-21).

ಯೋಥಾಮನ ಮಗ ಆಹಾಜನು ವಿಗ್ರಹ ಆರಾಧನೆಯಲ್ಲಿ ನಿರತನಾಗಿದ್ದನು ಮತ್ತು ತನ್ನ ಮಗನನ್ನು ದೇವರ ಮುಂದೆ ಬೆಂಕಿಯಲ್ಲಿ ಬಲಿಯಾಗಿ ಅರ್ಪಿಸಿದನು - ಅದು ದೇವರಿಗೆ ಅಸಹ್ಯ ಕಾರ್ಯವಾಗಿತ್ತು (2 ಅರಸುಗಳು 16:1-4)! ದಮಸ್ಕದಲ್ಲಿರುವ ಬಲಪೀಠ ದಂತೆಯೇ ದೇವಾಸ್ಥಾನದಲ್ಲಿ ಹೊಸ ಬಲಪೀಠವನ್ನು ಕಟ್ಟಿಸಿದನು. ದೇವಾಸ್ಥಾನದಲ್ಲಿ ತಂದ ಬೇರೆ ಬದಲಾವಣೆಗಳು ದೇವರನ್ನು ಮೆಚ್ಚಿಸುವದಕ್ಕಿಂತಲೂ ಹೆಚ್ಚಾಗಿ ಅಶ್ಯೂರದ ಅರಸನನ್ನು ಮೆಚ್ಚಿಸುವದಕ್ಕೆ ಮಾಡಿದನೆಂದು ತೋರಿಸುತ್ತವೆ (2 ಅರಸುಗಳು 16:10-20).

ಆಹಾಜನ ಮಗನಾದ **ಹಿಜ್ಕೀಯನು** ಎತ್ತರ ಸ್ಥಳಗಳನ್ನು, ಪವಿತ್ರ ಕಲ್ಲು ಕಂಬಗಳನ್ನು ಅಶೇರ ವಿಗ್ರಹ ಸ್ತಂಭಗಳನ್ನು ಮತ್ತು ವಿಗ್ರಹದಂತೆ ಅಲ್ಲಿ ಬಳಸಿದ ತಾಮ್ರದ ಸರ್ಪವನ್ನು ನಾಶಮಾಡಿ ದೇವರಿಗೆ ನಂಬಿಗಸ್ತನಾಗಿದ್ದನು (2 ಅರಸುಗಳು 18:1-8). ಇವನು ಕ್ರಿ.ಪೂ. 722ರಲ್ಲಿ ಯೆಹೂದ್ಯವನ್ನು ಆಳುತ್ತಿದ್ದನು. ಆ ಸಮಯದಲ್ಲಿ ಅಶ್ಯೂರರು ಇಸ್ರಾಯೇಲನು ತಮ್ಮ ಅಧೀನಕ್ಕೆ ತೆಗೆದುಕೊಂಡರು (2 ಅರಸುಗಳು 18:9-12). ನಂತರದಲ್ಲಿ, 185, 000 ಅಶ್ಯೂರರನ್ನು ಸಾಯಿಸಿ, ಅತಿ ಬೇಗನೆ ದೇವರು ಇಸ್ರಾಯೇಲ್ಯರನ್ನು ಮತ್ತು ಹಿಜ್ಕೀಯನನ್ನು ಅಂತಹ ದುರ್ಘಟನೆಯಿಂದ ಆಶ್ಚರ್ಯಕರವಾಗಿ ತಪ್ಪಿಸಿದನು (2 ಅರಸುಗಳು 18:13-19:37). ಹಿಜ್ಕೀಯ ಮೊಟ್ಟಡಿ ಕಾಲದಲ್ಲಿ ಯೆರೂಸಲೇಮಿಗೆ ಬೇಕಾದಂತ ನೀರನ್ನು ಹರಿಯುವಂತ ಕೆರೆಕಾಲುವೆಗಳನ್ನು ಕಟ್ಟಿಸಿದಕ್ಕೆ ಹಿಜ್ಕೀಯನು ಸ್ಮಾರಕವಾಗಿದ್ದಾನೆ (2 ಅರಸುಗಳು 20:20). ಈ ಕಾಲುವೆಗಳ ಸುರಂಗ ಮಾರ್ಗಗಳನ್ನು ಇಂದು ಸಹ ನೋಡಬಹುದು.

**ವಚನ 10.** ಹಿಜ್ಕೀಯ ಮಗನಾದ **ಮನಸ್ಸೆಯು** ಎತ್ತರ ಸ್ಥಳಗಳನ್ನು ತಿರಿಗಿ ಸ್ಥಾಪಿಸಿ, ಬಾಳನಿಗೋಸ್ಕರ ಯಜ್ಞವೇದಿಗಳನ್ನು ಕಟ್ಟಿಸಿ, ಅಶೇರ ವಿಗ್ರಹ ಸ್ತಂಭಗಳನ್ನು ನಿಲ್ಲಿಸಿ ದೇವರ ದೃಷ್ಟಿಯಲ್ಲಿ ಅಸಹ್ಯಕಾರ್ಯಗಳನ್ನು ಮಾಡಿದನು. ಆತನು ದೇವಾಲಯದಲ್ಲಿ ನಕ್ಷತ್ರ ಮಂಡಲಕ್ಕೆ ಕೈ ಮುಗಿದು ಆರಾಧಿಸಿದನು, ಮತ್ತು ತನ್ನ ಸ್ವಂತ ಮಗನನ್ನು ಬಲಿಯಾಗಿ ಅರ್ಪಿಸಿದನು

(2 ಅರಸುಗಳು 21:1-6). ರಾಜನು ಮತ್ತು ಜನರು ಎಲ್ಲಾ ದುಷ್ಕೃತ್ಯಗಳನ್ನು ಮಾಡಿದ್ದರಿಂದ, ದೇವರು ಯೆಹೂದ್ಯರನ್ನು ಸೆರೆಹಿಡಿದು ಇನ್ನೊಬ್ಬರ ಸ್ವಾಧೀನಕ್ಕೆ ಕೊಂಡುವಯ್ಯುವಂತೆ ಮಾಡಿದರು (2 ಅರಸುಗಳು 21:10-16). ಮನಸ್ಸೆಯ ಮಗನಾದ **ಆಮೋನನು** ಇದಕ್ಕಿಂತ ಗೋರವಾದ ದುಷ್ಟನಾಗಿದ್ದನು, ಆತನ ಸೇವಕರು ಅವನ ವಿರುದ್ಧವಾಗಿ ಒಳಸಂಚು ಮಾಡಿದರು ಮತ್ತು ಅವನನ್ನು ಕೊಂದರು (2 ಅರಸುಗಳು 21:19-24).

ಆಮೋಸನ ಮಗನಾದ **ಯೋಷೀಯನು** ಎಂಟು ವರ್ಷದವನಾಗಿರುವಾಗ, ರಾಜನಾದನು, ಅವನು ಬೇರೆ ರೀತಿಯ ಆತ್ಮಸ್ಥೈರ್ಯ ಹೊಂದಿದ್ದನು. ಮೋಶೆಯ ಧರ್ಮಶಾಸ್ತ್ರವು ದೇವಾಲಯದಲ್ಲಿ ಸಿಕ್ಕಿದ ನಂತರ, ಯೋಷಿಯನು ಪುನಃ ಸ್ಥಾಪನೆ ಕಡೆಗೆ ಮುನ್ನಡೆದನು (2 ಅರಸುಗಳು 22:1-23:25). ಅವನು ಜನರಿಗೆ ಮೋಶೆಯ ಧರ್ಮಶಾಸ್ತ್ರವನ್ನು ಓದುವಂತೆ ಮಾಡಿದನು ಮತ್ತು ದೇವರೊಂದಿಗೆ ಒಡಂಬಡಿಕೆ ಪುನಃ ಸ್ಥಾಪಿಸಿದನು. ಆತನು ಅನೇಕ ವಿಗ್ರಹ ಆರಾಧನೆಗಳನ್ನು ಹೊರಗೆ ಹಾಕಿದನು (ವಿಗ್ರಹಗಳು, ಯಜ್ಞವೇದಿಗಳನ್ನು ಕಲ್ಲುಕಂಬಗಳನ್ನು, ವಿಗ್ರಹ ಸ್ತಂಭಗಳನ್ನು ಮತ್ತು ಪಾತ್ರೆಗಳನ್ನು) ಮತ್ತು ಜನರನ್ನು ಹೊರಗೆ ಹಾಕಿದನು (ಯಾಜಕರು, ದೇವದಾಸರು, ಮಧ್ಯಸ್ತಗಾರರನ್ನು ಮತ್ತು ಯಂತ್ರ ಮಂತ್ರಗಾರರನ್ನು).

**ವಚನ 11.** ಆದಾಗ್ಯೂ **ಯೋಷಿಯನ** ಆಡಳಿತದಲ್ಲಿ ಉತ್ತಮ ಕಾರ್ಯಗಳುಂಟಾಗಿ ಬದಲಾವಣೆಗಳು ಕಂಡುಬಂದವು, ದೇವರು ಯೆಹೂದ್ಯದ ಮೇಲೆ ಉಗ್ರತೆಯನ್ನು ತೋರಿಸಲು ನಿರ್ಧರಿಸಿದ್ದನು (2 ಅರಸುಗಳು 23:26, 27). ಮತ್ತಾಯನು ಪುನಃ ಇಲ್ಲಿ ಸಂತತಿಯನ್ನು ಬಿಟ್ಟಿದ್ದಾನೆ, ಯೋಷಿಯನ ಮಗನಾದ ಎಲ್ಯಾಕೀಮನನ್ನು (ಯೆಹೋಯಾಕೀಮ) ತನ್ನ ವಂಶಾವಳಿಯಲ್ಲಿ ಬಿಟ್ಟಿದ್ದಾನೆ (ನೋಡಿರಿ 2 ಅರಸುಗಳು 23:34-24:6; 1 ಪೂರ್ವಕಾಲವೃತ್ತಾಂತ 3:15, 16).[19] **ಬಾಬೆಲಿಗೆ ಸೆರೆ ಹೋದಾಗ** ಎಲ್ಯಾಕೀಮನ ಮಗ **ಯೆಕೊನ್ಯ** (ಯೆಹೋಯಾಕೀನು) ರಾಜ್ಯಭಾರ ಮಾಡಿದನು. ಈ "ದೇಶ ಭಹಿಷ್ಕರಣೆ" ಕ್ರಿ.ಪೂ. 597ರಲ್ಲಿ ಆಗಿದೆ; ಆ ಸಮಯದಲ್ಲಿ ಹೆಚ್ಚಾಗಿ ರಾಜ ಮನೆತನದವರನ್ನು ಬಾಬೇಲಿಗೆ ಸೆರೆ ತೆಗೆದುಕೊಂಡು ಹೋದರು (2 ಅರಸುಗಳು 24:8-16). **ಆತನ ಸಹೋದರರು** ಎಂಬ ವಾಕ್ಯಭಾಗ ಅಕ್ಷರಶಃ ಸಹೋದರರು (ನೋಡಿರಿ 1:2) ಅಥವಾ ಬಹುಶಃ "ಆತನ ಆಳುಗಳು ಮತ್ತು ದೇಶದ ಪ್ರಧಾನ ಪುರುಷರು" (2 ಅರಸುಗಳು 24:15) ಎಂದು ಸೂಚಿಸುತ್ತದೆ.

ಇದೇ ಸಂದರ್ಭದಲ್ಲಿ, ಯೆಕೊನ್ಯ ಅವರ ಚಿಕ್ಕಪ್ಪನಾದ ಮತ್ತನ್ಯ ಎಂಬುವವನಿಗೆ ಅರಸನಾದ ನೆಬೂಕದ್ನೆಚ್ಚರನು ಚಿದ್ಕೀಯ ಎಂದು ಹೆಸರಿಟ್ಟು ಯೆಹೂದ್ಯದ ಅರಸನನ್ನಾಗಿ ನೇಮಿಸಿದನು. ಇವನು ಹನ್ನೊಂದು ವರ್ಷಗಳು ಆಳಿದನು ಅಂದರೆ, ಕ್ರಿ.ಪೂ. 586ರಲ್ಲಿ ನೆಬೂಕದ್ನೆಚ್ಚರನ ಸೈನ್ಯವು ಬಂದು ಯೆರೂಸಲೇಮನ್ನು ಮತ್ತು ದೇವಾಲಯವನ್ನು ನಾಶಮಾಡುವ ತನಕ ರಾಜ್ಯವಾಳಿದನು. ತನ್ನ ರಾಜದ್ರೋಹಕ್ಕಾಗಿ ಚಿದ್ಕೀಯನು ತನ್ನ ಮಕ್ಕಳನ್ನು ಅವನ ಎದುರಿನಲ್ಲಿಯೇ ವಧಿಸಿದ್ದನ್ನು ನೋಡಿದನು; ನಂತರ ಅವನ ಕಣ್ಣುಗಳು ಕಿತ್ತಿದರು. ಚಿದ್ಕೀಯನನ್ನು ಮತ್ತು ಉಳಿದ ಯೆಹೂದ್ಯ ಜನರನ್ನು ಬಾಬೇಲಿಗೆ ಸೆರೆ ತೆಗೆದುಕೊಂಡು ಹೋದರು (2 ಅರಸುಗಳು 24:17-25:21).[20] ಈತನಿಗೆ ಯೇಸು ಕ್ರಿಸ್ತನ ವಂಶಾವಳಿಯೊಂದಿಗೆ ಪ್ರತ್ಯಕ್ಷ ಸಂಬಂಧವಿಲ್ಲದ ಕಾರಣ ಈತನ ಹೆಸರು ಮತ್ತಾಯನು ಬರೆದ ವಂಶಾವಳಿಯಲ್ಲಿ ಸೇರಿಸಿರುವುದಿಲ್ಲ.

## ದಾವೀದನ ಉತ್ತರಾಧಿಕಾರಿಗಳು (1:12-16)

**12ಬಾಬೇಲಿಗೆ ಸೆರೆಹೋದ ಮೇಲೆ ಯೆಕೊನ್ಯನು ಶೆಯಲ್ತಿಯೇಲನನ್ನು ಪಡೆದನು. ಶೆಯಲ್ತಿಯೇಲನು ಜೆರುಬ್ಬಾಬೆಲನನ್ನು ಪಡೆದನು. 13ಜೆರುಬ್ಬಾಬೆಲನು ಅಬಿಹೂದನನ್ನು ಪಡೆದನು. ಅಬಿಹೂದನು ಎಲ್ಯಕೀಮನನ್ನು ಪಡೆದನು. ಎಲ್ಯಕೀಮನು ಅಜೋರನನ್ನು**

**ಪಡೆದನು. [14]ಅಜೋರನು ಸದೋಕನನ್ನು ಪಡೆದನು. ಸದೋಕನು ಅಖೀಮನನ್ನು ಪಡೆದನು. ಅಖೀಮನು ಎಲಿಹೂದನನ್ನು ಪಡೆದನು. [15]ಎಲಿಹೂದನು ಎಲಿಯಾಜರನನ್ನು ಪಡೆದನು. ಎಲಿಯಾಜರನು ಮತ್ತಾನನನ್ನು ಪಡೆದನು. ಮತ್ತಾನನು ಯಾಕೋಬನನ್ನು ಪಡೆದನು. [16]ಯಾಕೋಬನು ಮರಿಯಳ ಗಂಡನಾದ ಯೋಸೇಫನನ್ನು ಪಡೆದನು. ಈ ಮರಿಯಳಲ್ಲಿ ಕ್ರಿಸ್ತನೆಂಬ ಯೇಸು ಹುಟ್ಟಿದನು.**

ಈ ಮೂರನೆಯ ಭಾಗದ ವಂಶಾವಳಿಯು (1:12-16) ದಾವೀದನ ಉತ್ತರಾಧಿಕಾರಿಗಳ ಆತನ ಸಿಂಹಾಸನದಲ್ಲಿ ಯೆರೂಸಲೇಮನ್ನು ಆಳದೆ ಇರುವಂತವರ ಪಟ್ಟಿಯನ್ನು ಮಾಡಲಾಗಿದೆ. ಆರನೂರು ವರ್ಷಗಳು ವ್ಯಾಪಿಸಿರುತ್ತವೆ, ಯೇಸು ಕ್ರಿಸ್ತನ ಜನನದ ಮುಖಾಂತರ ಅದು ಅತ್ಯುನ್ನತ ಸ್ಥಾನಕ್ಕೆ ಹೋಗಲಾಗಿದೆ.

**ವಚನ 12.** ಈಗತಾನೇ ಸೂಚಿಸಿದಂತೆ "ದಾವೀದ"ನನ್ನು ವಂಶಾವಳಿಯಲ್ಲಿ ಮೊದಲಿನ ಭಾಗದಿಂದ ಎರಡನೆಯ ಭಾಗಕ್ಕೆ ಬದಲಾವಣೆಗೆ ಉಪಯೋಗಿಸಲಾಗಿದೆ (1:6), **ಬಾಬೇಲಿಗೆ ಮತ್ತು ಸೆರೆಹೋದ ಮೇಲೆ ಯೆಕೊನ್ಯನು** ಎರಡನೆಯ ಭಾಗದಿಂದ ಮೂರನೆಯ ಭಾಗಕ್ಕೆ ಬದಲಾವಣೆಗೆ ಉಪಯೋಗಿಸಲಾಗಿದೆ (1:11, 12; ನೋಡಿರಿ ವ್ಯಾಖ್ಯಾನ 1:17). ಕಾಲಾವಧಿಗೆ ಸೂಚನೆ ಇಲ್ಲಿ ಇದೆ. "ಸೆರೆಯಾಗುವ ಸಮಯ ಪ್ರಾರಂಭವಾದ ನಂತರ ಎಂದು ಇದೆ, ಆದರೆ ಅದೆಲ್ಲವು ಮುಗಿದ ನಂತರ ಎಂದು ಇರುವುದಿಲ್ಲ."[21]

ಮತ್ತಾಯನು ಯೆಕೋನ್ಯನನು ಮತ್ತು ಆತನ ಸಂತತಿಯವರನ್ನು ಕ್ರಿಸ್ತನ ವಂಶಾವಳಿಯಲ್ಲಿ ಸೇರಿಸಿದ್ದಾನೆ. ಇದು ದೇವರವರೆಗೂ ಪ್ರಸಿದ್ಧವಾಗಿದೆ. ಪ್ರವಾದಿಯಾದ ಯೆರೆಮೀಯಾನ ಬಾಯಿಂದ ಹೀಗೆ ಹೇಳಿದ್ದಾನೆ, ಯೆಹೋವನು ಇಂತೆನ್ನುತ್ತಾನೆ, "ಇವನನ್ನು ಮಕ್ಕಳಿಲ್ಲದವನು, ವ್ಯರ್ಥಜನ್ಮದವನು ಎಂದು ಬರೆಯಿರಿ; ಇವನ ಸಂತಾನದಲ್ಲಿ ಇನ್ನು ಮೇಲೆ ಯಾವನೂ ದಾವೀದನ ಸಿಂಹಾಸನದಲ್ಲಿ ಕೂತು ಯೆಹೂದ್ಯವನ್ನು ಆಳಿ ಬಾಳನು" (ಯೆರೆಮೀಯ 22:30). McGarvey ರವರು ಹೀಗೆ ವಿವರಿಸಿದ್ದಾರೆ, "ಅವನು ಮಕ್ಕಳಿಲ್ಲದವನಷ್ಟೆ, ಸಿಂಹಾಸನದಲ್ಲಿ ಕೂತುಕೊಳ್ಳಲು ಮಗನು ಇಲ್ಲದವನು ಎನ್ನುವ ಪರಿಕಲ್ಪನೆ ಇದೆ."[22]

ಈ ವ್ಯಾಖ್ಯಾನದೊಂದಿಗೆ ನೋಡುವಾಗ ಯೇಸು ಯೆರೂಸಲೇಮಿನ ಸಿಂಹಾಸನದಲ್ಲಿ ಆತನು ಕೂತುಕೊಳ್ಳಲಿಲ್ಲ ಮತ್ತು ಭೂಲೋಕದ ರಾಜ್ಯವನ್ನು ಆಳಲಿಲ್ಲ. ಆತನು ದಾವೀದನ ಸಿಂಹಾಸನವನ್ನು ಪರಲೋಕದಿಂದ ಆಳುತ್ತಿದ್ದಾನೆ (ಅಪೊಸ್ತಲರ ಕೃತ್ಯಗಳು 2:29-36). ಆತನ ಆಡಳಿತ ಪಂಚಾಶತಮ ದಿನದಂದು ಪ್ರಾರಂಭವಾಗಿದೆ, ಅಂದೆ ಆತನ ಸಭೆ/ರಾಜ್ಯ ಈ ಲೋಕದಲ್ಲಿ ಬಂದಿದೆ. ಯಾವಾಗ ಕ್ರಿಸ್ತನು ಮೋಡದಲ್ಲಿ ಹಿಂತಿರುಗಿ ಬರುತ್ತಾನೋ ಆ ಸಮಯದಲ್ಲಿ ಈ ರಾಜ್ಯವನ್ನು ತಂದೆಯಾದ ದೇವರ ಕೈಗೆ ಒಪ್ಪಿಸುತ್ತಾನೆ (1 ಕೊರಿಂಥ 15:23-26; 1 ಥೆಸಲೋನಿಕ 4:16, 17).

ಯೊಕೊನ್ಯನಿಗೆ ಏಳು ಮಕ್ಕಳಿದ್ದರು ("ಸೆರೆವಾಸಿ") ಎಂದು ಹಳೆ ಒಡಂಬಡಿಕೆಯ ವಂಶಾವಳಿಯಲ್ಲಿ ದಾಖಲಿಸಲಾಗಿದೆ, ಮತ್ತು **ಶೆಯಲ್ತಿಯೇಲನು** ಪಟ್ಟಿಯಲ್ಲಿ ಮೊದಲಿನವನಾಗಿದ್ದನು (1 ಪೂರ್ವಕಾಲವೃತ್ತಾಂತ 3:17, 18).[23] ಮೆಷೋರಿತಿಕ್ ವಾಕ್ಯಬರಹಗಳಲ್ಲಿ ಪೂರ್ವಕಾಲವೃತ್ತಾಂತದಲ್ಲಿ "ಪೆದಾಯನು" **ಜೆರುಬ್ಬಾಬೆಲನನ್ನು ಪಡೆದನು** (1 ಪೂರ್ವಕಾಲವೃತ್ತಾಂತ 3:19), ಆದರೆ ಸೆಪ್ಟಜಂಟ್‌ನಲ್ಲಿ (ಧರ್ಮಶಾಸ್ತ್ರದಲ್ಲಿ) "ಶೆಯಲ್ತಿಯೇಲ" ಎಂದು ಓದುತ್ತೇವೆ. ಈ ಶಬ್ದವನ್ನು ಇತರ ಗ್ರೀಕ್ ವಾಕ್ಯಗಳಲ್ಲಿಯೂ ಕೂಡ ಒಪ್ಪಲಾಗಿದೆ (ಎಜ್ರನು 3:2, 8; ನೆಹಮೀಯ 12:1; ಹಗ್ಗಾಯ 1:12, 14; 2:2, 23). "ಈ ಸಂಪ್ರದಾಯಗಳನ್ನು ಸಮರಸಗೊಳ್ಳುವದಕ್ಕೆ ಅನೇಕ ಸಲಹೆಗಳು ಕೊಡಲಾಗಿದೆ; 'ಜೆರುಬ್ಬಾಬೆಲನು' ಅಕ್ಷರಶಃ ಪೆದಾಯನಿಗೆ ಮಗನಾಗಿದ್ದನು ಮತ್ತು 'ಶೆಯಲ್ತಿಯೇಲನಿಗೆ' ಅಧಿಕೃತವಾದ ಮೈದುನ ಮದುವೆಯ ಧರ್ಮದ ಮೂಲಕ ಸಂಬಂಧ

ಹೊಂದಿದ್ದಾನೆಂದು ಅನೇಕರು ಗುರುತಿಸುತ್ತಾರೆ (ಹೋಲಿಸಿ. ಧರ್ಮೋಪದೇಶಕಾಂಡ 25:5-10)."[24] ಈ ಅಂಶದಿಂದಲೇ ಲೂಕನ ವಂಶಾವಳಿಯು ಮತ್ತಾಯನ ವಂಶಾವಳಿಯಿಂದ ಬೇರೆ ದಿಕ್ಕಿಗೆ ಹೋಗಿರುತ್ತದೆ, ತಕ್ಷಣದಲ್ಲಿಯೇ "ದಾವೀದನನ್ನು," "ಶೆಯಲ್ತಿಯೇಲನಿಗೆ," ಮತ್ತು "ಜೆರುಬ್ಬಾಬೆಲಗೆ," ಪುನಃ ಸಂಬಂಧ ಕಲ್ಪಿಸಿ ಮತ್ತಾಯನು ಬರೆದರೆ, ಲೂಕನು ಪುನಃ ಬೇರೆ ಮಾಡಿದ್ದಾನೆ (ಲೂಕ 3:27, 31).

ಕ್ರಿ.ಪೂ. 538ರಲ್ಲಿ ಪಾರಸಿಯ ರಾಜನ ಅಪ್ಪಣೆಯಂತೆ ಸೆರೆವಾಸದಿಂದ ಯೆಹೂದ್ಯರಲ್ಲಿ ಯೆರೂಸಲೇಮಿಗೆ ಹಿಂತಿರುಗಿ ಬಂದವನು ಜೆರುಬ್ಬಾಬೆಲನು (ಎಜ್ರನು 1:1-2:2). ಇವನೇ ಹಿಂತಿರುಗಿ ಬಂದಿರುವ ಸಂಪ್ರದಾಯಿಕವಾಗಿ ಅವಲೋಕನ ಮಾಡಿರುವ ನಾಯಕನಾಗಿದ್ದಾನೆ ಆತನನ್ನು "ಯೆಹೂದ್ಯ ಅರಸನಾದ ಶೆಷ್ಬಚ್ಚರನೆಂದು ಗುರುಸಿದರು" (ಎಜ್ರನು 1:8). ಹೇಗಿದ್ದರು, ಶೆಷ್ಬಚ್ಚರನೂ ಮತ್ತು ಜೆರುಬ್ಬಾಬೆಲನು ಬೇರೆ ಬೇರೆ ವ್ಯಕ್ತಿಗಳಾಗಿದ್ದಾರೆ, ಆದ್ದರಿಂದ ಜೆರುಬ್ಬಾಬೆಲನು "ಯೂದಯದ ಎರಡನೆಯ ದೇಶಧಿಪತಿಯನ್ನಾಗಿ" ಮಾಡುವಂತಾಯ್ತು (ಹಗ್ಗಾಯ 2:21). ದೇವರು ಜೆರುಬ್ಬಾಬೆಲನನ್ನು "ಮುದ್ರೆ ಉಂಗರಕ್ಕೆ" ಹೋಲಿಸುತ್ತಾನೆ (ಹಗ್ಗಾಯ 2:23), ಇದು ರಾಜತ್ವ ಮತ್ತು ಅಧಿಕಾರದ ಗುರತಾಗಿದೆ, ಬಹುಶಃ ಮೆಸ್ಸೀಯನ ವಾಗ್ದಾನಗಳು ದಾವೀದನ ಸಂತತಿಯ ಮುಖಾಂತರ ತಿರುಗಿ ಒತ್ತಿ ಹೇಳಲಾಗಿದೆ.[25]

**ವಚನಗಳು 13-15. ಜೆರುಬಾಬ್ಬೆಲನ** ನಂತರ, ಕೇವಲ ಒಂಭತ್ತು ಹೆಸರುಗಳು ಸುಮಾರು ಐದು ವರ್ಷಗಳ ಕಾಲಾವಧಿಯವರೆಗೆ ವ್ಯಾಪಿಸುತ್ತವೆ: **ಅಬಿಹೂದನು, ಎಲ್ಯಕೀಮ, ಅಜೋರ, ಸದೋಕ, ಅಖೀಮ, ಎಲಿಹೂದ, ಎಲಿಯಾಜರ, ಮತ್ತಾನ ಮತ್ತು ಯಾಕೋಬ.** ಆದುದರಿಂದ ಎಲ್ಲಾ ಸಂತತಿಯು ಇದರಲ್ಲಿ ಭಾಗವಹಿಸಿದ್ದರು ಎಂದು ಹೇಳುವದು ಸಂಶಯದಿಂದ ಕೂಡಿದೆ. ಈ ಮನುಷ್ಯರ ಹೆಸರುಗಳು ಹಳೆ ಒಡಂಬಡಿಕೆಯ ವಂಶಾವಳಿಯಲ್ಲಿ ಒಳಗೊಂಡಿರುವುದಿಲ್ಲ. ಯಾಕೆಂದರೆ ಹಳೆ ಮತ್ತು ಹೊಸ ಒಡಂಬಡಿಕೆಯ ಮಧ್ಯ ಬರುವ ಕಾಲದಲ್ಲಿ ಎಲ್ಲರೂ ಇಲ್ಲದಿದ್ದರೂ, ಅಧಿಕ ಸಂಖ್ಯೆಯಲ್ಲಿ, ಜೀವಿಸದೆ ಇರಬಹುದು. ಮತ್ತಾಯನು ಈ ವಂಶಾವಳಿಯನ್ನು ಅದರ ದಾಖಲೆಗಳನ್ನು ಇತರೆ ಸಂಪನ್ಮೂಲಗಳಿಂದ ತೆಗೆದುಕೊಂಡಿರ ಬೇಕು. ಯೆಹೂದ್ಯ ಇತಿಹಾಸಕಾರನಾದ Josephusನು ಯಾಜಕರ ಕುಟುಂಬದಿಂದ ಬಂದವನು, ಅವನು "ಸಾರ್ವಜನಿಕ ದಾಖಲೆಗಳಲ್ಲಿ ವಿವರಿಸಿದ್ದ"[26] ತನ್ನದೆ ವಂಶಾವಳಿಯನ್ನು ಕಂಡುಕೊಂಡಂತೆ ಆಧಾರಿಸಿ ತನ್ನ ಆತ್ಮ ಚರಿತ್ರೆ ಪ್ರಾರಂಭಿಸಿ ಬರೆದನು. ಅದೇ ರೀತಿಯಲ್ಲಿ ಯೆಹೂದ್ಯ ಜನರು ದಾವೀದನ ಸಂತತಿಯ ಕುರಿತು ಸಂಬಂಧವನ್ನು ಹೊಂದಿದವರಂತೆ ಕಾಣಿಸುತ್ತದೆ. ಮತ್ತಾಯನು ಬಹುಶಃ ತನ್ನ ಮಾಹಿತಿಗಳನ್ನು ಸಾರ್ವಜನಿಕ ದಾಖಲೆಗಳಿಂದ ಪಡೆದುಕೊಂಡಿರಬಹುದು ಅಥವಾ ಯೇಸುವಿನ ಕುಟುಂಬದಿಂದ ಪಡೆದಿರಬಹುದು. ಖಂಡಿತವಾಗಿ ಯೋಸೇಫನು ತನ್ನ ಸಂತತಿಯ ಕುರಿತಾಗಿ ಎಚ್ಚರಿಕೆಯಾಗಿದ್ದರಿಂದ ಮರಿಯಳನ್ನು ದಾವೀದನ ಊರಿಗೆ ಬೆತ್ಲೆಹೇಮಗೆ, ಕರೆದುಕೊಂಡು ಹೋಗಿ ಖಾನೇಸುಮಾರಿ ಮಾಡಿಸಿದನು (ಲೂಕ 2:1-7).

**ವಚನ 16.** ಮತ್ತಾಯನ ಭಾಷಾಂತರದಲ್ಲಿ ಯೇಸುವಿನ ವಂಶಾವಳಿ, **ಯೋಸೇಫನು** ಯೇಸುವಿಗೆ ಭೂಲೋಕದಲ್ಲಿ ತಂದೆ, ಈತನು **ಯಾಕೋಬನ** ಮಗನೆಂದು ಹೇಳಿದ್ದಾನೆ. ಲೂಕನು ಮಾತ್ರ ಯೋಸೇಫನು ಹೇಲೀಯ ಮಗನೆಂದು ಹೇಳುತ್ತಾನೆ (ಲೂಕ 3:23). ಹೇಗೆ ಈ ಭಿನ್ನತೆಯನ್ನು ಸಮರಸಗೊಳಿಸಬಹುದು? ಅಲ್ಲಿ ಅನೇಕ ಸಂತತಿಯನ್ನು ಮತ್ತಾಯನ ವಂಶಾವಳಿಯಲ್ಲಿ ಬಿಟ್ಟು ಬಿಡಲಾಗಿದೆ ಎಂದು ತೋರಿಸಲಾಗಿದೆ, ಮತ್ತು ಇದು ಬೇರೆ ರೀತಿ ಯಲ್ಲಿ ವಿವರಿಸಿರಬಹುದು. ಇನ್ನೊಂದು ಸಾಧ್ಯತೆ ಏನೆಂದರೆ ಯೋಸೇಫನು ನಿಜವಾಗಿಯು ದೈಹಿಕವಾಗಿ ಯಾಕೋಬನ ಮಗನಾಗಿದ್ದಾನೆ ಮತ್ತು ಯೋಸೇಫನು ಹೇಲೀಯನ ಅಳಿಯನು. ಹೇಲೀಯು ಮರಿಯಳ ತಂದೆಯಾಗಿದ್ದಾನೆ. ಇದು ಎರಡು ವಂಶಗಳ ಮಧ್ಯವಿರುವ ವ್ಯತ್ಯಾಸವನ್ನು ಪರಿಹರಿಸುತ್ತದೆ. ಇವರು ಯಾವ ವಂಶಾವಳಿಗೆ ಸಂಬಂಧಪಟ್ಟಿರುವರೆಂಬ

ನಂಬಿಕೆಯೊಂದಿಗೆ ಒಪ್ಪಿಕೊಳ್ಳುತ್ತದೆ.[27] ಈ ಇಬ್ಬರ ವಿಷಯದಲ್ಲಿ, ಯೋಸೇಫ ಮತ್ತು ಮರಿಯಳು ಇಬ್ಬರೂ ಸಹ ದಾವೀದನ ಸಂತತಿಯವರಾಗಿದ್ದಾರೆ.

ಇಲ್ಲಿ ಯೋಸೇಫನು "ಯೇಸುವಿನ ತಂದೆಯಾಗಿದ್ದನು" ಎಂದು ಹೇಳಿಲ್ಲ. ಈ ವಿಷಯದಲ್ಲಿ ಮತ್ತಾಯನು ಎಚ್ಚರವಹಿಸಿದ್ದಾನೆ, ಆದರೆ ಯೋಸೇಫನು **ಮರಿಯಳ ಗಂಡನಾಗಿದ್ದನು** ಮತ್ತು ಆಕೆಯು **ಯೇಸುವಿನ** ತಾಯಿಯಾಗಿದ್ದಳು ಎಂದು ಒತ್ತಿ ಹೇಳಿದ್ದಾನೆ. ಅದ್ಭುತವಾದ ಗರ್ಭಧಾರಣೆ ಮತ್ತು ಕನ್ಯೆಯಲ್ಲಿ ಜನನವಾಗುವ ಈ ಕಥೆಗೆ ಈ ಭಾಷೆಯು ಸುಗಮ ಮಾರ್ಗವಾಗಿದೆ (1:18-25).

ಯೇಸುವನ್ನು **ಮೆಸ್ಸೀಯ**ನೆಂದು ಅಥವಾ "ಕ್ರಿಸ್ತನೆಂದು" ಸೂಚಿಸಲಾಗಿತ್ತು. ಅಂತಿಮ ಭಾಗದಲ್ಲಿ (1:12-16) ಬರುವ ದಾವೀದನ ಉತ್ತರಾಧಿಕಾರಿಗಳು ರಾಜರಂತೆ ಆಡಳಿತ ಮಾಡದೆ ಇದ್ದರೂ, ಯೇಸು ಆಳಿದನು. ಅವನ ಆಡಳಿತವು ದಾವೀದನ ಸಿಂಹಾಸನದ ಮೇಲೆಯೇ ಹಾಗಿದ್ದರೂ ಆತನು ಆತ್ಮೀಕವಾದ ಅರಸನು. ಆತನು ಪರಲೋಕದಿಂದ ನಿತ್ಯ ರಾಜ್ಯವನ್ನು ಆಳುವನು, ಅದು ಎಂದೆಂದಿಗೂ ನಾಶವಾಗುವದಿಲ್ಲ (ಅಪೊಸ್ತಲರ ಕೃತ್ಯಗಳು 2:29-36; ನೋಡಿರಿ ದಾನಿಯೇಲ 2:44; 7:13, 14).

## ಸಾರಾಂಶ (1:17)

**17ಹೀಗೆ ಅಬ್ರಹಾಮನಿಂದ ದಾವೀದನವರೆಗೂ ಒಟ್ಟು ಹದಿನಾಲ್ಕು ತಲೆಗಳು. ದಾವೀದ ಮೊದಲುಗೊಂಡು ಬಾಬೆಲಿಗೆ ಸೆರೆಹೋಗುವ ವರೆಗೂ ಹದಿನಾಲ್ಕು ತಲೆಗಳು. ಬಾಬೇಲಿಗೆ ಸೆರೆಹೋದಂದಿನಿಂದ ಕ್ರಿಸ್ತನವರೆಗೂ ಹದಿನಾಲ್ಕು ತಲೆಗಳು.**

**ವಚನ 17.** ಈ ವಚನವು ವಂಶಾವಳಿಯ ಸಂಕ್ಷಿಪ್ತ ವರ್ಣನೆಯಾಗಿ ಉಪಕರಿಸುತ್ತದೆ. ಇದು ಒಂದನೇಯ ವಚನವನ್ನು ಸ್ಪಷ್ಟಪಡಿಸುತ್ತಾ ವಾಕ್ಯಭಾಗವನ್ನು ಒಂದೇ ವರ್ಗಕ್ಕೆ ಸೇರಿಸುತ್ತದೆ. 1ನೇ ವಚನದಲ್ಲಿ ಹೆಸರುಗಳು ಕ್ರಮವಾಗಿ ಪಟ್ಟಿ ಮಾಡಲಾಗಿದೆ ("ಯೇಸು ಮೆಸ್ಸೀಯ," "ದಾವೀದ," ಮತ್ತು "ಅಬ್ರಹಾಮ") 17ನೇ ವಚನದಲ್ಲಿ ಇದು ವಿರುದ್ಧವಾದ ದಿಕ್ಕಿನಲ್ಲಿರುವ ಕ್ರಮವನ್ನು ತೋರಿಸುತ್ತದೆ ("ಅಬ್ರಹಾಮ," "ದಾವೀದ," "ಮೆಸ್ಸೀಯ"). ಮುಂದೆ ವಂಶಾವಳಿಯು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ, ಪ್ರತಿಯೊಂದರಲ್ಲಿ **ಹದಿನಾಲ್ಕು ಸಂತಾನಗಳು ಇವೆ:**

1. **ಅಬ್ರಹಾಮನಿಂದ ದಾವೀದನವರೆಗೆ** (1:2-6);
2. **ದಾವೀದನಿಂದ ಬಾಬೆಲಿಗೆ ಸೆರೆ ಹೋಗುವವರೆಗೆ** (1:6-11);
3. **ಬಾಬೇಲಿಗೆ ಸೆರೆಹೋದಂದಿನಿಂದ ಮೆಸ್ಸೀಯನವರೆಗೆ** (1:12-16).

"ಜ್ಞಾಪಿಸಿಕೊಳ್ಳಲು ಸರಳವಾಗಿದೆ"[28] ಎಂದು Jack P. Lewis, ಅವರು ಮತ್ತು ಇತರೆ ವಿದ್ವಾಂಸರೊಂದಿಗೆ ಸೇರಿ ಸಲಹೆಯನ್ನು ಕೊಡುತ್ತಾನೆ, ಈ ಕ್ರಮದಲ್ಲಿ ಜೋಡಿಸಿರುವದು ಯೆಹೂದ್ಯರ ಇತಿಹಾಸದ ಮೂರು ಕಾಲಾವಧಿಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ.

ಕೆಲವೊಬ್ಬರು ದಾವೀದನ ಹೆಸರಿನಲ್ಲಿರುವ ಇಬ್ರಿಯ ಹದಿನಾಲ್ಕು ವ್ಯಂಜನಗಳ ಅಂಕಿಸಂಖ್ಯೆಗಳನ್ನು ಇದಕ್ಕೆ ಸರಿಸಮವಾಗಿವೆಯೆಂದು ಮುಖ್ಯವಾಗಿ ಸೂಚಿಸುವದನ್ನು ನೋಡಬಹುದು (ಇಬ್ರಿಯ ವ್ಯಂಜನಗಳಲ್ಲಿ ಈ ರೀತಿಯಲ್ಲಿ ಹೆಸರನ್ನು ಅನುವಾದಿಸಲಾಗಿದೆ "DWD"). ("D" ವರ್ಣಮಾಲೆಯಲ್ಲಿ ನಾಲ್ಕನೆಯದ್ದಾಗಿದೆ ಮತ್ತು "W" ಆರನೆಯ ಅಕ್ಷರವಾಗಿದೆ: 4+6+4=14.) Lewis ರವರು ಈ ಅಂಶವನ್ನು "ಬಹಳಷ್ಟು ಜನರು ಸ್ವೀಕರಿಸುವಂತಹದ್ದೆಂದು ಊಹಿಸಿಕೊಳ್ಳಲಾಗಿದೆ, ಆದರೆ ಇದಕ್ಕೆ ಸಾಕ್ಷ್ಯಾಧಾರಗಳಾಗಲೀ ಅಥವಾ ನಿರಾಕರಣೆಗೆ ಸಾಕ್ಷ್ಯಾಧಾರಗಳಾಗಲೀ ಇರುವುದಿಲ್ಲ."[29]

ಮೂರು ಗುಂಪುಗಳನ್ನು ವಿಂಗಡಿಸಿರುವದು, ಪ್ರತಿಯೊಂದರಲ್ಲಿ ಹದಿನಾಲ್ಕು ಸಂತತಿಗಳು ಒಳಗೊಂಡಿರುವದು, ಅದು ಕ್ರಿಸ್ತನು ಬರುವ ಸಮಯದ ಸಿದ್ಧತೆ ಪೂರ್ಣಗೊಂಡಿದೆ ಎಂದು ತೋರಿಸುತ್ತದೆ (ನೋಡಿರಿ ಗಲಾತ್ಯ 4:4). ಹೇಗಿದ್ದರು, ಅಂತಿಮ ಭಾಗವನ್ನು ಎಣಿಸುವದು ಕಷ್ಟಕರವಾಗಿದೆ (1:12-16), ಅಲ್ಲಿ ಹದಿನಾಲ್ಕು ಹೆಸರುಗಳಿರಬೇಕಿತ್ತು ಅಲ್ಲಿ ಕೇವಲ ಹದಿಮೂರು ಹೆಸರುಗಳನ್ನು ನೋಡುತ್ತೇವೆ. ಮುಂದೆ ಅದಕ್ಕೆ ಅನೇಕ ಪರಿಹಾರಗಳನ್ನು ಇಡಲಾಗಿದೆ ಆದರೆ ಅದಕ್ಕೆ ಯಾರು ತೃಪ್ತರಾಗಿರುವುದಿಲ್ಲ.

ಒಂದು ಪರಿಹಾರವಿದೆ, ಯೊಕನ್ಯನನ್ನು ಎಣಿಸಬೇಕು, ಈತನನ್ನು ಎರಡನೆಯ ಭಾಗದಿಂದ ತೆಗೆದುಕೊಳ್ಳಲಾಗಿದೆ (1:11, 12). ಹಾಗಿದ್ದರೂ ದಾವೀದನನ್ನು ಮೊದಲನೆಯ ಭಾಗದಿಂದ ಎರಡನೆಯ ಭಾಗಕ್ಕೆ ತೆಗೆದುಕೊಳ್ಳಲಾಗಿದೆ (1:6), ಮತ್ತು ಈತನನ್ನು ಎರಡನೆಯ ಸಮಯದಲ್ಲಿ ಎಣಿಸಲಿಲ್ಲ.

ಇನ್ನೊಂದು ಪರಿಹಾರ, ಮರಿಯಳನ್ನು ಹದಿನಾಲ್ಕನೆಯ ಕ್ರಮದಲ್ಲಿ ಎಣಿಸಬೇಕು ಹಾಗಿದ್ದರು ಬೇರೆ ಯಾವ ಸ್ತ್ರೀಯನ್ನು ವಂಶಾವಳಿಯಲ್ಲಿ ಎಣಿಸಿರುವುದಿಲ್ಲ, ಮತ್ತು ಮರಿಯಳು ಯೋಸೇಫನನ್ನು ಬೇರೆ ಸಂತತಿಯನ್ನು ಪ್ರತಿನಿಧಿಸಿದ್ದಳು ಎಂದು ನಂಬುವದು ಕಷ್ಟಕರವಾಗಿದೆ, ಆ ಯೋಸೇಫನನ್ನೆ ಮರಿಯಳು ಮದುವೆಯಾಗಿದ್ದು.

ಮೂರನೆಯ ಪ್ರಸ್ತಾಪವು, "ಯೊಕನ್ಯ" ಎನ್ನುವ ಹೆಸರನ್ನು ಎರಡನೆಯ ಭಾಗದಲ್ಲಿ ಅಂತಿಮವಾಗಿ "ಯೆಹೋಯಾಕೀಮನೆಂದು" ಓದಬೇಕು (ಅಥವಾ ಬಹುಶಃ "ಎಲ್ಯಾಕೀಮ"; 2 ಅರಸುಗಳು 23:34-24:6), ಮತ್ತು ಈ ಹೆಸರು ಯೋಕನ್ಯ ಮೂರನೇ ಗುಂಪಿನಲ್ಲಿ ಎಣಿಸಿ ಹದಿನಾಲ್ಕು ಮಾಡಬೇಕು.[30] ಆದಾಗ್ಯೂ, ಈ ಭಾಗದಲ್ಲಿರುವ ಎರಡು ಬೇರೆ ಬೇರೆ ಹೆಸರುಗಳ ಸಾಕ್ಷಾಧಾರಗಳು ಬಹಳ ಬಲಹೀನಕರವಾಗಿವೆ. ಮುಂದೆ, ಈ ಪ್ರಸ್ತಾಪವನ್ನು ಸ್ವೀಕರಿಸಿದರೆ, ವಂಶಾವಳಿಯಲ್ಲಿ ಬರುವ ಪ್ರತಿಯೊಬ್ಬರ ಹೆಸರುಗಳ ಪುನರಾವರ್ತನೆಯ ಹೊಂದಾಣಿಕೆಯು ಮುರಿದು ಹೋಗಬಹುದು.

## ಪಾಠಗಳು

## ಉಪಯೋಗವಿಲ್ಲದ ವಚನಗಳು? (1:1-17)

ಅನೇಕ ಸತ್ಯವೇದ ಅಭ್ಯಾರ್ಥಿಗಳು ಮತ್ತಾಯ 1:1-17ರಲ್ಲಿ ಬರುವ ವಂಶಾವಳಿಯಲ್ಲಿ ಅನೇಕ ಮೆರಗುಕೊಡುವ ಅಂಶಗಳನ್ನು ಕಂಡುಕೊಂಡಿದ್ದಾರೆ. ಇದರ ನಂತರ ಕೆಲವರು ಪಟ್ಟಿ ಸಿದ್ಧಪಡಿಸುವದರಲ್ಲಿ ಚೆನ್ನಾಗಿ ಗೊತ್ತಿರುವುದಿಲ್ಲ, ಮತ್ತು ಕೆಲವು ಸಾರಿ ಅವರ ಹೆಸರುಗಳನ್ನು ಉಚ್ಚರಿಸಲು ಕಷ್ಟಕರವಾಗಿರುತ್ತದೆ. ಆದಾಗ್ಯೂ ಸಹ ಇಂದು ವಂಶಾವಳಿಯು ಕೆಲವು ಮುಖ್ಯವಾದ ಪಾಠಗಳನ್ನು ನಮಗಾಗಿ ಹೊಂದಿರುತ್ತದೆ:

1. ದೇವರು ತನ್ನ ವಾಗ್ದಾನಗಳನ್ನು ತನ್ನ ಸಮಯದಲ್ಲಿ ನೆರವೇರಿಸುತ್ತಾನೆ.
2. ದೇವರು ತನ್ನ ಜನರು ಆತನ ವಿರುದ್ಧವಾಗಿ ದುಷ್ಟಕಾರ್ಯಗಳನ್ನು ಮಾಡುವಾಗ ಅವರನ್ನು ಶಿಕ್ಷಿಸುತ್ತಾನೆ.
3. ದೇವರು ತನ್ನ ಯೋಜನೆ ಪೂರ್ಣಗೊಳಿಸಲು ಪಾಪವನ್ನು ತುಂಬಿರುವ ಜನರನ್ನು ಉಪಯೋಗಿಸುತ್ತಾನೆ.
4. ದೇವರು ತಂದೆತಾಯಿ ಮಾಡಿರುವ ಪಾಪಗಳನ್ನು ಅವರ ಮಕ್ಕಳ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.
5. ದೇವರ ಮುಖ್ಯ ಉದ್ದೇಶ ಇಸ್ರಾಯೇಲ್ಯನು ಸ್ಥಾಪಿಸುವದು ಮತ್ತು ಕಾಪಾಡುವದು, ಕ್ರಿಸ್ತನನ್ನು ಲೋಕದಲ್ಲಿ ಬರಮಾಡುವದು.[31]

## ಯೇಸುವಿನ ವಂಶಾವಳಿಯಲ್ಲಿ ಸ್ತ್ರೀಯರು (1:1-17)

ಕ್ರಿಸ್ತನ ವಂಶಾವಳಿಯಲ್ಲಿ ಸೂಚಿಸಿರುವ ಐದು ಜನ ಸ್ತ್ರೀಯರನ್ನು ಉಪಯೋಗಿಸಿ ಒಳ್ಳೆಯ ಸಂದೇಶವನ್ನು ಅಭಿವೃದ್ಧಿಪಡಿಸಬಹುದು:

1. ತಾಮಾರಳು - ತಿರಸ್ಕಾರಕ್ಕೆ ಒಳಗಾದ ಸ್ತ್ರೀ (1:3; ಆದಿಕಾಂಡ 38:6-30);
2. ರಾಹಾಬಳು - ಸೂಳೆಯು ವಿಶ್ವಾಸಿಯಾದಳು (1:5; ಯೆಹೋಶುವ 2:1-21);
3. ರೂತಳು - ನಂಬಿಗಸ್ತ ಸೊಸೆ (1:5; ರೂತ 1-4);
4. ಬತ್ಷೆಬೆ - ಅಪನಂಬಿಗಸ್ತ ಹೆಂಡತಿ (1:6; 2 ಸಮುವೇಲ 11; 12);
5. ಮರಿಯಳು - ದೇವರು ತನ್ನ ಮಗನಿಗಾಗಿ ಆರಿಸಿಕೊಂಡ ತಾಯಿ (1:16; ನೋಡಿರಿ 1:18-25; 12:46-50; ಲೂಕ 1:26-56; 2:1-52; ಯೋಹಾನ 2:1-11; 19:25-27).[32]

---

ಟಿಪ್ಪಣಿಗಳು

[1]Douglas S. Huffman, "Genealogy," in *Dictionary of Jesus and the Gospels,* ed. Joel B. Green and Scot McKnight (Downers Grove, Ill.: InterVarsity Press, 1992), 255. [2]Macrobius *Saturnalia* 2.4.11. [3]Eusebius *Ecclesiastical History* 1.7.13. [4]ಈ ಅಂಶದ ಕುರಿತು ಕಷ್ಟಕರವಾದ ವಿಷಯ ಒಳಗೊಂಡಿದೆ, ಏನೆಂದರೆ ಯೋಸೇಫನು ಎರಡು ಕಡೆಯಲ್ಲಿ ಪ್ರಸ್ತಾಪಿಸಲಾಗಿದೆ, ಮತ್ತು ಮರಿಯಳ ಕುರಿತು ಲೂಕನ ವಂಶಾವಳಿಯಲ್ಲಿ ನಮೂದಿಸಿರುವುದಿಲ್ಲ. [5]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 35. [6]Donald A. Hagner, *Matthew 1-13,* Word Biblical Commentary, vol. 33A (Dallas: Word Books, 1993), 9. [7]Douglas R. A. Hare, *Matthew,* Interpretation (Louisville: John Knox Press, 1993), 6. [8]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 20. [9]Huffman, 255. [10]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 75.

[11]ಅನೇಕ ವಂಶಾವಳಿಗಳಲ್ಲಿ ಕೇವಲ ಪುರುಷರ ಹೆಸರುಗಳನ್ನು ಪಟ್ಟಿಮಾಡಿದ್ದಾರೆ. ಹಾಗಿದ್ದರೂ, ಹಳೆ ಒಡಂಬಡಿಕೆಯಲ್ಲಿ ಅನೇಕ ಉದಾಹರಣೆಗಳಿವೆ ಸ್ತ್ರೀಯರನ್ನು ಸಹ ಒಳಗೊಂಡಿದೆ (ಆದಿಕಾಂಡ 22:20-24; 25:1-6; 36:1-14; 1 ಪೂರ್ವಕಾಲವೃತ್ತಾಂತ 1:32; 2:3, 4, 18-20, 24, 26, 46; 3:1-9). ಕೆಲವು ಸನ್ನಿವೇಶಗಳಲ್ಲಿ ತಂದೆಯಾದವರು ಒಬ್ಬರಿಗಿಂತಲೂ ಹೆಚ್ಚಿನ ಹೆಂಡತಿಯರು ಇದ್ದಾರೆ/ಉಪಪತ್ನಿಯರು ಇದ್ದಾರೆ, ಈ ಸ್ತ್ರೀಯರನ್ನು ನಮೂದಿಸಿರುವದು ಅವರ ಮಕ್ಕಳನ್ನು ವರ್ಗಿಕರಿಸುವದಕ್ಕಾಗಿಯೇ. [12]Huffman, 255-56. [13]Lewis, 39. [14]Huffman, 256. [15]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 15. [16]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 116. [17]J. W. McGarvey, *The New Testament Commentary,* vol. 1, *Matthew and Mark* (N.p., 1875; reprint, Delight, Ark.: Gospel Light Publishing Co., n.d.), 16. [18]ಯಾವ ರಾಜನು ಉಜ್ಜಿಯನು (*ಓಜಿಯಸ್*) ಆಗಿದ್ದನು ಎನ್ನುವ ವಿಷಯವು ಚರ್ಚೆಮಾಡುವ ವಿಷಯವಾಗಿದೆ. ಕೆಲವರು ಅಹಜೀಯಾ ಪರವಾಗಿದ್ದಾರೆ ಆದರೆ ಅಜರ್ಯನ ಪರವಾಗಿ ಹೆಚ್ಚಿನ ಜನರಿದ್ದಾರೆ (ನೋಡಿರಿ 2 ಅರಸು 14:21; 15:13, 30). [19]ಎಲ್ಯಾಕೀಮನ ಸಹೋದರ ಯೆಹೋವಾಹಾಜನು - ಇವನು ಕ್ರಿಸ್ತನ ಸಂತತಿಯಲ್ಲಿ ಭಾಗವಾಗಿರಲಿಲ್ಲ - ಇವನಿಗಿಂತಲೂ ಮೊದಲು ಮೂರು ತಿಂಗಳ ಆಡಳಿತ ಮಾಡಿದನು. ಆದರೆ ಪರೋಹನಿಕೋನಿಂದ ಇವನು ಅಧಿಕಾರದಿಂದ ತಳ್ಳಲ್ಪಟ್ಟನು (2 ಅರಸು 23:31-33). [20]ಯೆರೂಸಲೇಮಿನಿಂದ ಬಾಬೆಲ್‌ಗೆ

ನಾಲ್ಕು ಸಂದರ್ಭಗಳಲ್ಲಿ ಸೆರೆಯಾಗಿ ತೆಗೆದುಕೊಂಡುಹೋದರು (ದಾನಿಯೇಲ 1:1-7; ಯೆರೆಮೀಯಾ 52:28-30): (1) ಕ್ರಿ.ಪೂ. 605 ರಲ್ಲಿ ದಾನಿಯೇಲನನ್ನು ತೆಗೆದುಕೊಂಡು ಹೋದರು, (2) ಕ್ರಿ.ಪೂ. 597 ರಲ್ಲಿ, ಯೋಕಾನ್ಯನನ್ನು ತೆಗೆದುಕೊಂಡು ಹೋದರು, (3) ಕ್ರಿ.ಪೂ. 586 ರಲ್ಲಿ ಚಿದ್ಕಿಯನನ್ನು ತೆಗೆದುಕೊಂಡು ಹೋದರು, ಮತ್ತು (4) ಕ್ರಿ.ಪೂ. 582 ರಲ್ಲಿ ಗೆದಾಲಿಯಾ ಅಧಿಪತಿಯಾದ ನಂತರ ಮೋಸದಿಂದ ಕೊಲೆ ಮಾಡಲಾಗಿದೆ.

[21]Hagner, 11. [22]McGarvey, 21. [23]ಬಾಬೇಲ ಅಧ್ಯಾಯವು ನೆಬದೆಚರನ್ ಆಡಳಿತದಿಂದ ಪ್ರಾರಂಭ ಅರಸು ಮನೆತದವರಿಂದ ಉತ್ತೇಜನ ಕೊಟ್ಟಿರುವವರ ನಿಶ್ಚಿತವಾದ ಪಟ್ಟಿಗಳನ್ನು "ಯುದಾಯ ಅರಸನ 5 ಮಕ್ಕಳನ್ನು ಒಳಗೊಂಡಿದೆ" (James B. Pritchard, ed., *Ancient Near Eastern Texts: Relating to the Old Testament,* 3d. ed. [Princeton, N.J.: Princeton University Press, 1969], 308). [24]H. G. M. Williamson, "Zerubbabel," in *The International Standard Bible Encyclopedia,* rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:1193. [25]ತಾರತಮ್ಯ ನೋಡಿ, ಯಾಹೋವನು ಹೀಗನ್ನುತ್ತಾನೆ (ಯೆಹೋಯಾಕೀಮ, ಕೊನ್ಯನೆಂಬ) ನೀನು ನನ್ನ ಬಲಗೈಯ ಮುದ್ರೆಯುಂಗರವಾಗಿದ್ದರೂ ನಾನು ನಿನ್ನನ್ನು ಅಲ್ಲಿಂದ ಕಿತ್ತು ಹಾಕುತ್ತಿದ್ದೆನು (ಯೆರೆಮೀಯ 22:24). [26]Josephus *Life* 1.1-6; ನೋಡಿರಿ *Against Apion* 1.7. [27]ಹಿಂದೆ ಹೇಳಿದಂತೆಯೇ ಮತ್ತಾಯ 1, ಯೋಸೇಫನ ಸಂತತಿ ಪತ್ತೆ ಹಚ್ಚಲಾಗಿದೆ ಹಾಗೇಯೇ ಲೂಕ 3ರಲ್ಲಿ ಮರಿಯಳ ಸಂತತಿ ಪತ್ತೆ ಹಚ್ಚಲಾಗಿದೆ ಎಂದು ಬಹಳ ಜನ ನಂಬಿದ್ದಾರೆ. [28]Lewis, 36. [29]Ibid., 37. ಈ ಆಚಾರಕ್ಕೆ ಪಾರಿಭಾಷಿಕ ಭಾಷೆಯಲ್ಲಿ "Gematria." ಬಹುಶಃ ಈ ಪದವು ಪ್ರಕಟಣೆ 13:17, 18ರಲ್ಲಿ ಬಳಸಿರಬಹುದು ಸ್ಪಷ್ಟವಾದ ಉದಾಹರಣೆಯು *Barnabas* 9.8. ರಲ್ಲಿ ಕಾಣಿಸುತ್ತದೆ. [30]ನೋಡಿ Hagner, 5-6.

[31]Jack Wilhelm, "The Bible's Useless Verses," *RSVP* Newsletter 49-12-80-12 (1980) ಮೇಲೆ ಆಧಾರಗೊಂಡಿದೆ. Jack Wilhelm, P.O. Box 2222, Florence, AL 35630 ಅವರಿಂದ ಅನುಮತಿಯೊಂದಿಗೆ ಬಳಸಲಾಗಿದೆ. [32]Ibid.